MAA ಫ್ರೆಂಡ್ಸ್ ಸಾರಥ್ಯದಲ್ಲಿ...

www.yuvamarga.com | Yuva Marga | yuva_marga_

# ಯುವ ಮಾರ್ಗ

YUVA MARGA NEWS PAPER – VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 05 | ಸಂಚಿಕೆ: 108 | ಶುಕ್ರವಾರ : 13-02-2026 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 108 | FRIDAY : 13-02-2026 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ರಾಯಚೂರು ಮಹಾನಗರ ಪಾಲಿಕೆಯ ಪ್ರಗತಿ ಪರಿಶೀಲನೆ ನಡೆಸಿದ ಪ್ರಾದೇಶಿಕ ಆಯುಕ್ತರು





ಯುವಮಾರ್ಗ ಸುದ್ದಿ

**ರಾಯಚೂರು,ಫೆ.12–** ರಾಯಚೂರು ಮಹಾನಗರ ಪಾಲಿಕೆಯ ಆಡಳಿತಾಧಿಕಾರಿಗಳು ಆಗಿರುವ ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀವ್ ಅವರು ಫೆ.11ರಂದು ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ರಾಯಚೂರು ಮಹಾನಗರ ಪಾಲಿಕೆಯ ಪ್ರಗತಿ ಪರಿಶೀಲನೆ ನಡೆಸಿದರು.

ಹಳೆಯ ಜಿಲ್ಲಾಧಿಕಾರಿಗಳ ಕಚೇರಿಯ ಈಗಿನ ಮಹಾನಗರ ಪಾಲಿಕೆಯ ಕಚೇರಿಯ ಕೋರ್ಟ ಹಾಲನಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಆಯುಕ್ತರು, ರಾಯಚೂರು ಸಿಟಿ ಜನತೆಗೆ ಸಮರ್ಪಕವಾಗಿ ಕುಡಿಯುವ ನೀರು ಸರಬರಾಜು ಸೇರಿದಂತೆ ಯಾವುದೇ ರೀತಿಯ ಮೂಲಭೂತ ಸೌಕರ್ಯ ಕಾರ್ಯವು ಇನ್ಮುಂದೆ ಸಹ ಅಚ್ಚುಕಟ್ಟಾಗಿ ನಡೆಯಬೇಕು ಎಂದು ಸೂಚನೆ ನೀಡಿದರು.

ರಾಯಚೂರು ಮಹಾನಗರ ಪಾಲಿಕೆಯಿಂದ ಸಿಟಿಯಲ್ಲಿ ಈಗ ನಡೆಯುತ್ತಿರುವ ಸ್ವಚ್ಛತಾ ಕಾರ್ಯಗಳು ಮತ್ತು ನಗರ ಸೌಂದರ್ಯೀಕರಣ ಕಾರ್ಯಗಳನ್ನು ಯಥಾವತ್ತು ಮುಂದುವರೆಸಬೇಕು. ಸುಗಮ ಸಂಚಾರಕ್ಕೆ ತೊಂದರೆಯಾಗದ ರೀತಿಯಲ್ಲಿ ಸಿಟಿಯಲ್ಲಿನ ಎಲ್ಲ ಕಡೆಗೆ ರಸ್ತೆ ಬದಿಗಳಲ್ಲಿ ಸಸಿಗಳನ್ನು ನೆಡುವ ಕಾರ್ಯ ಮಾಡಬೇಕು ಎಂದು ಸೂಚನೆ ನೀಡಿದರು.

ರಾಯಚೂರು ಸಿಟಿಯಲ್ಲಿ ಒಟ್ಟು 35 ವಾರ್ಡ ಗಳಿದ್ದು, ಕೃಷ್ಣಾ (2ನೇ ಪುಟಕ್ಕೆ>>>)

## ದೆಹಲಿಯಲ್ಲಿ ಡಿಕೆಶಿ–ರಾಹುಲ್ ಭೇಟಿ : ಸಿಎಂ ಸ್ಥಾನಕ್ಕೆ ಪಟ್ಟು

**ಬೆಂಗಳೂರು, ಫೆ. 12–** ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ನಾಯಕತ್ವ ಜಟಾಪಟಿ ಕ್ಲೈಮ್ಯಾಕ್ಸ್ ಹಂತ ತಲುಪಿದ್ದು, ಕೊನೆಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಹುಲ್‌ಗಾಂಧಿ ಅವರನ್ನು ಭೇಟಿ ಮಾಡಿ ಚರ್ಚಿಸಿರುವುದು ಕಾಂಗ್ರೆಸ್‌ನಲ್ಲಿ ಸಂಚಲನ ಮೂಡಿಸಿದೆ.

ಹಲವು ದಿನಗಳಿಂದ ರಾಹುಲ್‌ಗಾಂಧಿ ಅವರ ಭೇಟಿಗಾಗಿ ಪ್ರಯತ್ನ ನಡೆಸಿದ್ದ ಡಿ.ಕೆ. ಶಿವಕುಮಾರ್ ಅವರು, ಇಂದು ರಾಹುಲ್‌ಗಾಂಧಿ ಅವರನ್ನು ಭೇಟಿ ಮಾಡಿ ರಾಜ್ಯ ರಾಜಕೀಯದ ಎಲ್ಲ ವಿದ್ಯಮಾನ ಗಳನ್ನು ಅವರ ಗಮನಕ್ಕೆ ತಂದು ಅಧಿಕಾರ ಹಂಚಿಕೆ, ನಾಯಕತ್ವ ಬದಲಾವಣೆ, ಕೆಪಿಸಿಸಿ ಅಧ್ಯಕ್ಷಗಿರಿ ಸೇರಿದಂತೆ ಎಲ್ಲ ವಿಚಾರಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿರುವುದು ರಾಜಕೀಯವಾಗಿ ಮಹತ್ವ ಪಡೆದುಕೊಂಡಿದೆ.

ಅಸ್ಸಾಂ ವಿಧಾನಸಭಾ ಚುನಾಣೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕರ ಜತೆ ಇಂದು ದೆಹಲಿಯಲ್ಲಿರುವ ಸೋನಿಯಾಗಾಂಧಿ ಅವರ ನಿವಾಸದಲ್ಲಿ ಮೊದಲಿಗೆ ಪ್ರಿಯಾಂಕ ಗಾಂಧಿ ನಂತರ ಸೋನಿಯಾಗಾಂಧಿ ಅವರನ್ನು ಭೇಟಿ ಮಾಡಿ ಚರ್ಚಿಸಿದ ಡಿ.ಕೆ.ಶಿವಕುಮಾರ್, ಅಸ್ಸಾಂ ಚುನಾವಣೆಯ ಚರ್ಚೆ ಬಳಿಕ ರಾಹುಲ್‌ಗಾಂಧಿ ಅವರ ಜತೆ ರಾಜ್ಯ ರಾಜಕೀಯದ



ಬಗ್ಗೆ ಚರ್ಚೆ ನಡೆಸಿದರು ಎಂದು ಹೇಳಲಾಗಿದೆ.

ರಾಜ್ಯ ರಾಜಕಾರಣದ ಬಗ್ಗೆ ಡಿ.ಕೆ. ಶಿವಕುಮಾರ್ ಅವರು ರಾಹುಲ್‌ಗಾಂಧಿ ಅವರ ಜತೆ ಚರ್ಚೆ ನಡೆಸಿದ ಸಂದರ್ಭದಲ್ಲಿ ಕಾಂಗ್ರೆಸ್‌ನ ಅಧಿನಾಯಕಿ ಸೋನಿಯಾಗಾಂಧಿ, ಪ್ರಿಯಾಂಕ ಗಾಂಧಿ ಸಹ ಉಪಸ್ಥಿತರಿದ್ದರು.

ಈ ಮೂವರ ಜತೆಯೂ ಡಿ.ಕೆ. ಶಿವಕುಮಾರ್ ಸುದೀರ್ಘ ಮಾತುಕತೆ ನಡೆಸಿ ತಮ್ಮ ಪಕ್ಷ ನಿಷ್ಠೆ, ಪಕ್ಷ ಸೇವೆ ಎಲ್ಲವನ್ನು ಅವರ ಗಮನಕ್ಕೆ ತಂದು ತಮ್ಮ ಶ್ರಮಕ್ಕೆ ಪ್ರತಿಫಲ ನೀಡಿ ಎಂದು ಮನವಿ ಮಾಡಿದರು ಎನ್ನಲಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಆಗಿರುವ ಅಧಿಕಾರ ಹಂಚಿಕೆಯ ಒಪ್ಪಂದದಂತೆ ನಾವೆಲ್ಲ ನಡೆದುಕೊಳ್ಳಬೇಕಿದೆ. ಅದರಂತೆ ನನಗೂ ಉನ್ನತ ಹುದ್ದೆಗೆ ಅವಕಾಶ ಮಾಡಿಕೊಡಿ ಎಂದು ಡಿ.ಕೆ. ಶಿವಕುಮಾರ್ ವರಿಷ್ಠರಲ್ಲಿ ಬೇಡಿಕೆ ಇಟ್ಟಿದ್ದಾರೆ ಎಂದು ಹೇಳಲಾಗಿದೆ.

ಅಧಿಕಾರ ಹಂಚಿಕೆಯ ಜಟಾಪಟಿಗೆ ಆದಷ್ಟು ಬೇಗ ತೆರೆ ಎಳೆಯಿರಿ. ಒಂದು ಸ್ಪಷ್ಟ ತೀರ್ಮಾನವನ್ನು ಶೀಘ್ರ ಪ್ರಕಟಿಸಿ ಎಂಬ ಬೇಡಿಕೆಯನ್ನು ಇಟ್ಟರು ಎಂದು ಡಿ.ಕೆ. ಶಿವಕುಮಾರ್ ಅವರ ಆಪ್ತ ಮೂಲಗಳು ಹೇಳಿವೆ.ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಹವಾಲನ್ನು ಆಲಿಸಿದ ರಾಹುಲ್‌ಗಾಂಧಿ ಅವರು ನಿಮ್ಮ ಪಕ್ಷನಿಷ್ಠೆ, ಸೇವೆ ನಮ್ಮ ಗಮನದಲ್ಲಿದೆ. ನಿಮ್ಮ ಮೇಲೆ ನಮಗೆ ಪ್ರೀತಿ ಅಭಿಮಾನ ಎಲ್ಲವೂ ಇದೆ. ಆದಷ್ಟು ಬೇಗ ತೀರ್ಮಾನ ಮಾಡುತ್ತೇವೆ ಸ್ವಲ್ಪ ತಾಳ್ಮೆಯಿಂದ ಕಾಯಿರಿ ಎಂದು ಹೇಳಿದರು ಎನ್ನಲಾಗಿದೆ.

ಅಧಿಕಾರ ಹಂಚಿಕೆಯ ಬಗ್ಗೆ ಏಕಾಏಕಿ ಒಂದು ತೀರ್ಮಾನಕ್ಕೆ ಬರಲು ಈಗಲೇ ಸಾಧ್ಯವಿಲ್ಲ. ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರನ್ನು ದೆಹಲಿಗೆ ಕರೆಸಿ ಮಾತನಾಡುತ್ತೇವೆ. ನಂತರ ಒಂದು ತೀರ್ಮಾನಕ್ಕೆ ಬರುತ್ತೇವೆ (2ನೇ ಪುಟಕ್ಕೆ>)

### ಮಾನ್ವಿ: ಕಲ್ಮಠ ಗಾರಿಗೆ ಜಾತ್ರೆ ಅಂಗವಾಗಿ ಜಿಲ್ಲಾ ಮಟ್ಟದ ರೈತ ಸಮಾವೇಶ

## ದೇಶದಲ್ಲಿನ 140 ಕೋಟಿ ಜನರು ನಿತ್ಯದ ಆಹಾರಕ್ಕಾಗಿ ರೈತನನ್ನೇ ಅವಲಂಭಿಸಿದ್ದಾರೆ, ನಾವು ರೈತನನ್ನು ದೇವರ ಸ್ವರೂಪದಂತೆ ನಿತ್ಯ ಸ್ಮರಿಸಿಕೊಳ್ಳಬೇಕು: ಡಾ.ಎ.ಆರ್ ಕುರುಬರ









ಯುವಮಾರ್ಗ ಸುದ್ದಿ

**ಮಾನ್ವಿ,ಫೆ.12–** ಪಟ್ಟಣದ ಧ್ಯಾನ ಮಂದಿರದ ಆವರಣದಲ್ಲಿ ಕಲ್ಮಠ ಗಾರಿಗೆ ಜಾತ್ರೆ ಅಂಗವಾಗಿ ಕೃಷಿ ಇಲಾಖೆ, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯ ರೈತ ಸಂಘ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಸಭಾ ತಾಲೂಕು ಘಟಕ ಮಾಧ್ಯಮ ಸಮಿತಿ ವತಿಯಿಂದ ಹಮ್ಮಿಕೊಂಡ ಜಿಲ್ಲಾ ಮಟ್ಟದ ರೈತ ಸಮಾವೇಶವನ್ನು ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕರಾದ ಡಾ.ಎ.ಆರ್ ಕುರುಬರ ಉದ್ಘಾಟಿಸಿ ಮಾತನಾಡಿ ದೇಶದಲ್ಲಿನ 140 ಕೋಟಿ ಜನರು ನಿತ್ಯದ ಆಹಾರಕ್ಕಾಗಿ ರೈತನನ್ನೇ ಅವಲಂಭಿಸಿದ್ದಾರೆ. ಅದ್ದರಿಂದ ಬದುಕುವುದಕ್ಕೆ ಅಗತ್ಯವಿರುವ ಅನ್ನವನ್ನು ನೀಡುವ ರೈತನನ್ನು ,ನಾವು ದೇವರ ಸ್ವರೂಪದಂತೆ ನಿತ್ಯ ಸ್ಮರಿಸಿಕೊಳ್ಳಬೇಕು.ಅದ್ದರೆ ನಮ್ಮಗೆ ಅಗತ್ಯ ವಿರುವ ಎಲ್ಲಾವನ್ನು ನೀಡುವ ರೈತ ಇಂದು ,ಸಂಕಷ್ಟದ ಪರಿಸ್ಥಿತಿಯಂದ ಹೊರಬರಬೇಕಾದರೆ ಸಾಧನೆ ತೋರಿದ ಯಶಸ್ವಿ ರೈತರ ಜಮೀನುಗಳಲ್ಲಿನ ಕೃಷಿ ಪದ್ದತಿಯನ್ನು ಕುಟುಂಬದ ಜೋತೆ ಭೇಟಿ ನೀಡಿ ತಮ್ಮ ಜಮೀನುಗಳಲ್ಲಿಯು ಕೂಡ ಉತ್ತಮ ಕೃಷಿ ಪದ್ದತಿಯನ್ನು ಅಳವಡಿಸಿಕೊಂಡಾಗ ಮಾತ್ರ ಕೃಷಿಯಲ್ಲಿ ಹೆಚ್ಚಿನ ಯಶಸ್ಸನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಕೃಷಿ ವಿಶ್ವವಿದ್ಯಾಲಯಗಳು ರೈತರ ದೇವಾಲಯಗಳಿದಂತೆ ವಿಶ್ವವಿದ್ಯಾಲಯದ ವಿಜ್ಞಾನಿ ರೈತನ ಯಶಸ್ಸಿಗೆ ಶ್ರಮಿಸಿದಾಗ ಮಾತ್ರ ಸಾರ್ಥಕತೆ ದೊರೆಯುತ್ತದೆ. ರೈತರು ಕೇವಲ ಮಳೆಯನ್ನು ಅಶ್ರಯಿಸಿ ಬೆಳೆಯನ್ನು ಬೆಳೆದಲ್ಲಿ ಕೃಷಿ ಲಾಭದಾಯಕವಾಗುವುದಿಲ್ಲ ವಿವಿಧ ಬೆಳೆ ಪದ್ದತಿಗಳನ್ನು ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡು ನಿಶ್ಚಿತ ಅದಾಯವನ್ನು ಪಡೆದು ಕೃಷಿಯನ್ನು ಲಾಭದಾಯವಾಗಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ರಾಯಚೂರು ಕೃಷಿ ವಿಶ್ವವಿದ್ಯಾಲಯದಿಂದ ಜಿಲ್ಲೆಯ 200 ಎಕರೆ ಭತ್ತದ ಬೆಳೆ ಪ್ರದೇಶದಲ್ಲಿ ಭತ್ತದ ನಂತರ ಎಳ್ಳು,ಸಾಸಿವೆ ಬೆಳೆ ಪದ್ದತಿಯನ್ನು ರೈತರಿಗೆ ಪರಿಚಯಿಸಿದ್ದು ಕಡಿಮೆ ಕೃಷಿ ವೆಚ್ಚದಲ್ಲಿ ಹೆಚ್ಚಿನ ಲಾಭವನ್ನು ಪಡೆಯುತ್ತಿದ್ದಾರೆ.

ಭಾರತ ಸರ್ಕಾರವು ತಾಳೆ ಬೆಳೆಗೆ ನಿಶ್ಚಿತ ಬೆಲೆಯನ್ನು ನಿಗದಿ ಪಡಿಸಿರುವುದರಿಂದ ರೈತರು ತಾಳೆ ಬೆಳೆಯನ್ನು ಬೆಳೆಯಬಹುದು. ಉತ್ತಮ ಆರೋಗ್ಯವನ್ನು ಪಡೆಯಬೇಕಾದಲ್ಲಿ ಭೂಮಿಯ ಆರೋಗ್ಯವನ್ನು ನಾವು ಕಾಪಡಿಕೊಳ್ಳಬೇಕಾಗಿದೆ ಹಾಗೂ ಆರೋಗ್ಯಕ್ಕೆ ಪೂರಕವಾದ ಆಹಾರವನ್ನು ನಾವು ಉತ್ಪದನೆ ಮಾಡಿಕೋಳ್ಳಬೇಕಾಗಿದೆ ಎಂದು ತಿಳಿಸಿದರು.

ಕೃಷಿ ವಸ್ತು ಪ್ರದರ್ಶನ ಮಳಿಗೆಗಳನ್ನು ಉದ್ಘಾಟಿಸಿ ಜಿಲ್ಲಾ ಕೃಷಿ ಜಂಟಿ ನಿರ್ದೇಶಕರಾದ ಪ್ರಕಾಶ.ಆರ್. ಚೌಹಾಣ್ ಮಾತನಾಡಿ ಸರ್ಕಾರವು ಕೃಷಿ ಇಲಾಖೆಯ ಮೂಲಕ ರೈತರಿಗೆ ಕೃಷಿಗೆ ಪೂರಕವಾದ ಎಲ್ಲಾ ಮಾಹಿತಿ ಸೇರಿದಂತೆ ಕೃಷಿ ಪರಿಕರಗಳನ್ನು ಕೂಡ ಸಹಾಯಧನದ ಮೂಲಕ ನೀಡುತ್ತಿದ್ದು ರೈತರು ಕೃಷಿ ಇಲಾಖೆಯ ಯೋಜನೆಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಲ್ಮಠದ ಶ್ರೀ ವಿರೂಪಾಕ್ಷ ಪಂಡಿತರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಿ ಮಾತನಾಡಿ ಕಲ್ಮಠ ಗಾರಿಗೆ ಜಾತ್ರೆ ನಿಮಿತ್ಯವಾಗಿಟ್ಟು ಕೊಂಡು ಜಿಲ್ಲೆಯ ರೈತರಿಗೆ ಅಗತ್ಯ ಅಧುನಿಕ ಕೃಷಿಯ ಕುರಿತು ಮಾಹಿತಿಯನ್ನು ನೀಡುವ ಉದ್ದೇಶದಿಂದ ಜಿಲ್ಲಾ ಮಟ್ಟದ ರೈತ ಸಮಾವೇಶವನ್ನು ಅಯೋಜಿಸಲಾಗಿದೆ ಎಂದು ತಿಳಿಸಿದರು.

ದಿವ್ಯಸಾನಿಧ್ಯವನ್ನು ಚೀಕಲಪರ್ವಿ ಶ್ರೀ ರುದ್ರಮುನೀಶ್ವರ ಮಠದ ಶ್ರೀ ಸದಾಶಿವಮಹಾಸ್ವಾಮಿಗಳು ವಹಿಸಿದರು. ಕಲ್ಮಠ ಶ್ರೀ ವಿರೂಪಾಕ್ಷೇಶ್ವರ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ವತಿಯಿಂದ ಹಮ್ಮಿಕೊಂಡ ಉಚಿತ ಆರೋಗ್ಯ ಶಿಬಿರವನ್ನು ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ಚಾಲನೆ ನೀಡಿದರು ಹಾಗೂ ಕಂದಾಯ ಇಲಾಖೆಯಿಂದ ರೈತರಿಗೆ ದೊರೆಯುವ ಸೌಲಭ್ಯಗಳ ಕುರಿತು ಮಾಹಿತಿಯನ್ನು ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಗೌರವಾಧ್ಯಕ್ಷರಾದ ಚಾಮರಸ ಮಾಲಿ ಪಾಟೀಲ್ ಬೆಟ್ಟದೂರು ವಹಿಸಿಕೊಂಡು ಮಾತನಾಡಿ ರೈತರು ಸಂಪ್ರಾದಾಯಿಕ ಬೆಳೆ ಪದ್ದತಿಯ ಜೊತೆಗೆ ಗ್ಯಾರಂಟಿ ಅದಾಯವನ್ನು ನೀಡುವ ಕೃಷಿ ಪದ್ದತಿಗಳನ್ನು ಅಳವಡಿಸಿಕೊಂಡಾಗ ಮಾತ್ರ ರೈತರಿಗೆ ಉತ್ತಮ ಅದಾಯ ದೊರೆಯುತ್ತದೆ ಕೃಷಿಯಲ್ಲಿ ನಷ್ಟವಾಗುವುದಿಲ್ಲ ಹೆಚ್ಚು ಸಾವಯವ ಹಾಗೂ ನೈಸರ್ಗಿಕ ಕೃಷಿ ಪದ್ದತಿಯನ್ನು ಅವಲಂಬಿಸುವುದರಿಂದ ನಿರಂತರವಾಗಿ ಉತ್ತಮ ಗುಣಮಟ್ಟದ ಕೃಷಿ ಉತ್ಪನ್ನಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಮಂಡ್ಯದ ಸಾವಯವ ರೈತ ಕೃಷ್ಣಪ್ಪ ಬೆನ್ನೂರು ಪಂಚತರಂಗಿಣಿ ಐದು ಹಂತಗಳ ಕೃಷಿ ಪದ್ದತಿ ಕುರಿತು ಮಾಹಿತಿ ನೀಡಿದರು.

ಹಿರಿಯ ಪರಿಸರ ಅಂಕಣಕರಾರದ ಅಮರೇಗೌಡ ಗೋನಾವರ ತುಂಗಭದ್ರ ಜಲಾಶಯ ಹಾಗೂ ಕೃಷಿಯಲ್ಲಿ ನೀರಿನ ಬಳಕೆ ಕುರಿತು ಉಪನ್ಯಾಸ ನೀಡಿದರು.

ಕೃ.ವಿ.ವಿ.ರಾಯಚೂರು ಕೃಷಿ ವಿಜ್ಞಾನಿಗಳಾದ ಡಾ.ಪ್ರಭುರಾಜ್.ಎ, ಇ–ಸ್ಯಾಪ್ ತಂತ್ರಜ್ಞಾನ ಕುರಿತು ರೈತರಿಗೆ ಮಾಹಿತಿಯನ್ನು ನೀಡಿದರು. ಕೃ.ವಿ.ವಿ.ರಾಯಚೂರು ಸಾವಯವ ಕೃಷಿ ವಿಭಾಗದ ಮುಖ್ಯಸ್ಥರಾದ ಡಾ.ಎಂ.ಎ. ಬಸವಣ್ಣಪ್ಪ ಸಾವಯವ ಕೃಷಿ ಹಾಗೂ ಮನೆಯಂಗಳದಲ್ಲಿನ ತೋಟ ಕುರಿತು ಉಪನ್ಯಾಸ ನೀಡಿದರು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ.ತಿಮ್ಮಣ್ಣ, ಉಪನ್ಯಾಸಕರಾದ ಡಾಬಸವಪ್ರಸಾದ್ .ಬಿ. ಪಕ್ಷಿ ಪ್ರೇಮಿ ಸಲ್ಲಾವುದಿನ್ನ್ ಉಪನ್ಯಾಸ ನೀಡಿದರು. ಜಿಲ್ಲೆಯ ವಿವಿಧ ತಾಲೂಕುಗಳ ಕೃಷಿ (2ನೇ ಪುಟಕ್ಕೆ>>>)

## ಕರಡಕಲ್ : ಪಿ ಎಂ ಶ್ರೀ ಶಾಲೆಗೆ ಬಣ್ಣದ ಕಂಗೊಳ ಕೃತಗ್ಯತಾ ಟ್ರಸ್ಟ್‌ನ ಸಾಮಾಜಿಕ ಸೇವೆಗೆ ಸಾರ್ವಜನಿಕರ ಮೆಚ್ಚುಗೆ



ಯುವಮಾರ್ಗ ಸುದ್ದಿ

**ಲಿಂಗಸುಗೂರು,ಫೆ.12–** ತಾಲೂಕಿನ ಲಿಂಗಸುಗೂರು ಗ್ರಾಮೀಣ ಸಿ.ಆರ್.ಸಿ ವ್ಯಾಪ್ತಿಯ ಕರಡಕಲ್ ಗ್ರಾಮದ ಪಿ ಎಂ ಶ್ರೀ ಸರ್ಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆ ಇದೀಗ ಹೊಸ ರೂಪದಲ್ಲಿ ಕಂಗೊಳಿಸುತ್ತಿದೆ. ಬೆಂಗಳೂರಿನ ಕೃತಗ್ಯತಾ ಟ್ರಸ್ಟ್‌ನ ಸಾಮಾಜಿಕ ಕಾಳಜಿಯಿಂದ ಶಾಲೆಗೆ ಸಂಪೂರ್ಣವಾಗಿ ಸುಣ್ಣ ಬಣ್ಣ ಹಚ್ಚಿ ನವೀಕರಣಗೊಳಿಸಲಾಗಿದ್ದು, ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರಲ್ಲಿ ಸಂತಸ ಮೂಡಿಸಿದೆ.

1ರಿಂದ 7ನೇ ತರಗತಿವರೆಗೆ ಒಟ್ಟು 340 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿರುವ ಈ ಶಾಲೆಯಲ್ಲಿ 12 ತರಗತಿ ಕೊಠಡಿಗಳು, ರಂಗಮಂದಿರ, ಬಿಸಿ ಊಟದ ಕೊಠಡಿ, ಶಾಲಾ ಕಚೇರಿ ಹಾಗೂ ಕಾಂಪೌಂಡ್ ಗೋಡೆಗಳು ಹಲವು ವರ್ಷಗಳಿಂದ ಬಣ್ಣ ಕಾಣದೆ (2ನೇ ಪುಟಕ್ಕೆ>>>)

### ಹೆಗ್ಗಡದಿನ್ನಿ ಗ್ರಾಮದಲ್ಲಿ ಎತ್ತುಗಳು ಬಾರ ಎಳೆಯುವ ಸ್ಪರ್ಧೆ

## ಗ್ರಾಮೀಣ ಪರಂಪರೆ ಉಳಿಸಿಕೊಳ್ಳಿ – ಕಲಿಗಣನಾಥ ಸ್ವಾಮಿ

ಯುವಮಾರ್ಗ ಸುದ್ದಿ

**ಅರಕೇರಾ,ಫೆ.12–** ಇಂದಿನ ಆಧುನಿಕ ಯುಗದಲ್ಲಿ ಗ್ರಾಮೀಣ ಸೊಗಡಿನ ಆಚರಣೆ ಹಾಗೂ ಪರಂಪರೆಯ ಉಳಿವಿಗೆ ಪ್ರತಿಯೊಬ್ಬರ ಸಹಕಾರ ನೀಡಬೇಕು ಎಂದು ವೇ.ಮೂ. ಕಲಿಗಣನಾಥ ಸ್ವಾಮಿ ಹೇಳಿದರು.

ತಾಲ್ಲೂಕಿನ ಹೆಗ್ಗಡದಿನ್ನಿ ಗ್ರಾಮದಲ್ಲಿ ವೀರಭದ್ರ ಸ್ವಾಮಿಗಳ ಜಾತ್ರೆಯ ಅಂಗವಾಗಿ ಮಂಗಳವಾರ ಆಯೋಜಿಸಿದ್ದ ಎತ್ತುಗಳು ಬಾರ ಎಳೆಯುವ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದರು. ಇದೊಂದು ರೈತರ ಹಬ್ಬವಾಗಿದ್ದು ,ತಮ್ಮ ಎತ್ತುಗಳ ಪ್ರದರ್ಶನ ಹಾಗೂ ಸಾಮರ್ಥ್ಯ ಇಲ್ಲಿ ಅನಾವರಣ ಮಾಡಲು ಉತ್ತಮ ಅವಕಾಶವಿದೆ. ಪೂರ್ವಜರ ಕಾಲದ ಆಚರಣೆ, ವಿಚಾರಗಳನ್ನು ಯುವ ಪೀಳಿಗೆಗೆ ಪರಿಚಯಿಸಲು ಆಗಾಗ್ಗೆ ಇಂತಹ ಸ್ಪರ್ಧೆಗಳನ್ನು ಆಯೋಜಿಸಿಬೇಕು ಇದರಿಂದ ನಮ್ಮ ನೆಲದ ಸಂಸ್ಕೃತಿ ಗೌರವ ಹೆಚ್ಚುತ್ತದೆ ಎಂದು ತಿಳಿಸಿದರು.





ಈ ಸಂದರ್ಭದಲ್ಲಿ ಗೆದ್ದಿರುವ ಅಂತಹ ಎತ್ತುಗಳಿಗೆ ಬಹುಮಾನ ವಿತರಣೆ ಕಾರ್ಯಕ್ರಮ ನೆರವೇರಿತು

ಪ್ರಥಮ ಬಹುಮಾನ 21,000 ರವಿ ಗೌಡ ಮಾತ್ಪಳ್ಳಿ, ದ್ವಿತೀಯ ಬಹುಮಾನ 15,000 ತಾಯಪ್ಪ ಇರಬಿಗೇರ, ತೃತೀಯ ಬಹುಮಾನ 10,000 ರಂಗನಾಥ್ ಇರಬಿಗೇರ.

ಚತುರ್ಥಿ ಬಹುಮಾನ ನವಕಲ್ಲು ಕಿಚ್ಚ ಬಾಯ್ಸ್ 5,000 ಈ ರೀತಿಯಾಗಿ ಪೂಜ್ಯಶ್ರೀಗಳಿಂದ ಬಹುಮಾನಗಳನ್ನು ವಿತರಿಸಲಾಯಿತು.

ಈ ವೇಳೆಯಲ್ಲಿ ಬಸವರಾಜ್ ಪೂಜಾರಿ ಅರಕೇರಾ, ಹನುಮಂತರಾಯ ಆಕಳ ಕುಂಪಿ, ಶೇಖರಪ್ಪ ಗೌಡ ಅರಕೇರಾ, ಪಶುಆಧಿಕಾರಿ ಇಮಾಮ್ ಸಾಬ್, ಹುಸ್ಮಾನ್ ಅಲ್ಲಿ,ಕಲ್ಲು ತುಂಡಿನ ಅಧ್ಯಕ್ಷರು ರಾದ ರವಿಗೌಡ ಮಾತ್ಪಳ್ಳಿ, ನಿರ್ಣಯಾಕರಾದ ಹನುಮಂತರಾಯ ಜಿ, ಶರಣಬಸವ ಕಾನಪುರ್, ಗ್ರಾಮದ ಮುಖಂಡರು ಗುರುಹಿರಿಯರು ಹಾಗೂ ಕಲ್ಲು ತುಂಡು ಕಮಿಟಿಯ ಊರಿನ ಎಲ್ಲಾ ಸದಸ್ಯರು ಭಾಗಿಯಾಗಿದ್ದರು.

# ಮೊದಲನೇಯ ಪುಟದಿಂದ

## ರಾಯಚೂರು ಮಹಾನಗರ ಪಾಲಿಕೆಯ ಪ್ರಗತಿ ಪರಿಶೀಲನೆ ನಡೆಸಿದ ಪ್ರಾದೇಶಿಕ ಆಯುಕ್ತರು

ಮತ್ತು ತುಂಗಭದ್ರಾ ನದಿಗಳು ನಗರದಿಂದ 20 ರಿಂದ 30 ಕಿ.ಮೀ ದೂರದಲ್ಲಿವೆ. ಕೃಷ್ಣ ನದಿಯಿಂದ ಶೇ.80ರಷ್ಟು ಮತ್ತು ತುಂಗಭದ್ರಾ ನದಿಯಿಂದ ಶೇ.20 ಪ್ರಮಾಣದಷ್ಟು ನೀರು ಪಡೆಯಲಾಗುತ್ತಿದೆ. ಚಿಕ್ಕಸೂಗೂರನಲ್ಲಿನ ಕುಡಿಯುವ ನೀರು ಶುದ್ಧೀಕರಣ ಘಟಕ ಮತ್ತು ರಾಂಪೂರ ಬಳಿಯಲ್ಲಿನ ಕುಡಿಯುವ ನೀರು ಶುದ್ಧೀಕರಣ ಘಟಕದ ಮೂಲಕ ನದಿ ನೀರನ್ನು ಶುದ್ಧೀಕರಣಗೊಳಿಸಿ ನಗರಕ್ಕೆ ನೀರು ಪೂರೈಸಲಾಗುತ್ತಿದೆ.

ರಾಯಚೂರು ಸಿಟಿಯಲ್ಲಿ ಒಟ್ಟು 650 ಕಿ.ಮೀ ರಸ್ತೆ ಜಾಲದ ವ್ಯವಸ್ಥೆಯಿದೆ. ಇತ್ತೀಚಿನ ಒಳಚರಂಡಿ ಜಾಲದ ಉದ್ದ 300 ಕಿ.ಮೀ ಇರುತ್ತದೆ. 73,000 ಮನೆಗಳು ಇರುತ್ತವೆ. ಸಿಟಿಯಲ್ಲಿ ಇದುವರೆಗೆ 431 ಕಿ.ಮೀ ನಷ್ಟು ಒಳಚರಂಡಿ ಜಾಲದ ವ್ಯವಸ್ಥೆ ಇದ್ದು ಈ ಪೈಕಿ 300 ಕಿ.ಮೀ ಜಾಲ ಕಾರ್ಯನಿರ್ವಹಿಸುತ್ತಿದೆ ಎಂದು ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸಭೆಗೆ ವಿವರಿಸಿದರು.

ರಾಯಚೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಗರವನ್ನು ಸೌಂದರ್ಯೀಕರಣಗೊಳಿಸಲು ಬೇಸಿಗೆ ಕಾಲದಲ್ಲಿ ತಾಪಮಾನವನ್ನು ನಿಯಂತ್ರಿಸಿ ಪರಿಸರದ ಸಮತೋಲನವನ್ನು ವಾಯು ಗುಣಮಟ್ಟವನ್ನು ಹೆಚ್ಚಿಸಲು ಹಾಗೂ ವಿಶೇಷವಾಗಿ ವಾಯುಮಾಲಿನ್ಯ ನಿಯಂತ್ರಿಸಿ ನಗರವನ್ನು ಪರಿಸರ ಸ್ನೇಹಿ ನಗರವನ್ನಾಗಿ ರೂಪಿಸಲು ಹೆಚ್ಚಿನ ಸಂಖ್ಯೆಯಲ್ಲಿ ಗಿಡಮರ ನೆಡುವುದು ಅವಶ್ಯವಿರುವ ಕಾರಣ 99.99 ಲಕ್ಷ ರೂ ವೆಚ್ಚದಲ್ಲಿ ಕಾಮಗಾರಿ ನಿರ್ವಹಿಸಲು ಅಂದಾಜು ಪತ್ರಿಕೆಯನ್ನು ಸಿದ್ಧಪಡಿಸಿದ್ದು ಆಡಳಿತಾತ್ಮಕ ಅನುಮೋದನೆ ಪಡೆದು ಕಾರ್ಯಗತಗೊಳಿಸಲಾಗುವುದು ಎಂದು ಇದೆ ವೇಳೆ ಪಾಲಿಕೆಯ ಆಯುಕ್ತರು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಪಾಲಿಕೆಯ ಸಮಿತಿಯ ಕಾರ್ಯದರ್ಶಿ ಕೃಷ್ಣ ಶಾವಂತಗೇರಿ, ಉಪ ಆಯುಕ್ತರಾದ ಶರಣಪ್ಪ ಸತ್ಯಂಪೇಟೆ, ಸಂತೋಷ ರಾಣಿ ಸೇರಿದಂತೆ ಪಾಲಿಕೆಯ ಇನ್ನಿತರ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಕರಡಕಲ್ : ಪಿ ಎಂ ಶ್ರೀ ಶಾಲೆಗೆ ಬಣ್ಣದ ಕಂಗೊಳ ಕೃತಗ್ಯತಾ ಟ್ರಸ್ಟ್‌ನ ಸಾಮಾಜಿಕ ಸೇವೆಗೆ ಸಾರ್ವಜನಿಕರ ಮೆಚ್ಚುಗೆ

ಮಸುಕಾಗಿದ್ದವು. ಇದರಿಂದ ಶಾಲೆಯ ವಾತಾವರಣ ನಿರುತ್ಸಾಹಕಾರಿ ಸ್ಥಿತಿಯಲ್ಲಿತ್ತು. ಇದೀಗ ಹೊಸ ಬಣ್ಣದ ಅಲಂಕಾರದಿಂದ ಶಾಲೆ ಆಕರ್ಷಕವಾಗಿ ಕಾಣುತ್ತಿದ್ದು, ಮಕ್ಕಳಲ್ಲಿ ಹೊಸ ಚೈತನ್ಯ ತುಂಬಿದೆ.

ಶಾಲೆಯ ಮುಖ್ಯ ಶಿಕ್ಷಕ ಸೂಗೂರಯ್ಯ ಹಿರೇಮಠ ಮಾತನಾಡಿ, "ಬಹಳ ವರ್ಷಗಳಿಂದ ನಮ್ಮ ಶಾಲೆಗೆ ಬಣ್ಣ ಹಚ್ಚುವ ಅವಕಾಶ ದೊರಕಿರಲಿಲ್ಲ. ಜನತಾಪುರ ಶಾಲೆಯ ಶಿಕ್ಷಕರಾದ ಶ್ರೀ ಮೌನೇಶ್ ಎಂ ಅವರ ಸಹಕಾರದೊಂದಿಗೆ ಕೃತಗ್ಯತಾ ಟ್ರಸ್ಟ್ ಬೆಂಗಳೂರು ಅವರಿಗೆ ಮನವಿ ಸಲ್ಲಿಸಿದ್ದೆವು. ಮನವಿಗೆ ಸ್ಪಂದಿಸಿದ ಟ್ರಸ್ಟ್ ಶಾಲೆಯ ಸಂಪೂರ್ಣ ಕಟ್ಟಡಕ್ಕೆ ಸುಣ್ಣ-ಬಣ್ಣ ಹಚ್ಚಿ ನವೀಕರಣಗೊಳಿಸಿದೆ. ಇದರ ಫಲವಾಗಿ ಮಕ್ಕಳು ಹೆಚ್ಚು ಉತ್ಸಾಹದಿಂದ ಶಾಲೆಗೆ ಆಗಮಿಸುತ್ತಿದ್ದಾರೆ" ಎಂದು ಸಂತಸ ವ್ಯಕ್ತಪಡಿಸಿದರು.

ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (SDMC) ಅಧ್ಯಕ್ಷ ತಿಪ್ಪಣ್ಣ ಮಾತನಾಡಿ, "ಲಿಂಗಸುಗೂರು ಪಟ್ಟಣದ ಸಮೀಪದಲ್ಲಿದ್ದರೂ ನಮ್ಮ ಶಾಲೆಯಲ್ಲಿ 340 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಶಾಲೆಯ ವಾತಾವರಣ ಸುಂದರವಾಗಿರುವುದು ಮಕ್ಕಳ ಕಲಿಕೆಗೆ ಬಹಳ ಮುಖ್ಯ. ಈ ಬಣ್ಣ ಕಾಮಗಾರಿ ವಿದ್ಯಾರ್ಥಿಗಳ ಹಾಜರಾತಿ ಹೆಚ್ಚಿಸಲು ಹಾಗೂ ಇನ್ನಷ್ಟು ಮಕ್ಕಳನ್ನು ಸರ್ಕಾರಿ ಶಾಲೆಯತ್ತ ಆಕರ್ಷಿಸಲು ಸಹಕಾರಿ ಆಗಲಿದೆ" ಎಂದು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸುಜಾತ ಹುನೂರ ಅವರು ಕೃತಗ್ಯತಾ ಟ್ರಸ್ಟ್‌ನ ಸೇವೆಯನ್ನು ಪ್ರಶಂಸಿಸಿ, "ಈಗಾಗಲೇ ತಾಲೂಕಿನ ಮೂರು ಶಾಲೆಗಳಿಗೆ ಸುಣ್ಣ ಬಣ್ಣ ಮಾಡಿಸಿರುವ ಟ್ರಸ್ಟ್, ಇದೀಗ ನಾಲ್ಕನೇ ಶಾಲೆಯಾಗಿ ಕರಡಕಲ್ ಶಾಲೆಯನ್ನು ನವೀಕರಿಸಿದೆ. ಟ್ರಸ್ಟ್‌ನ ಸ್ಥಾಪಕರಾದ ಅರುಣಾ ದಿವಾಕರ್ ಅವರ ಸಾಮಾಜಿಕ ಹಾಗೂ ಶೈಕ್ಷಣಿಕ ಬದ್ಧತೆ ಶ್ಲಾಘನೀಯ. ಇಲಾಖೆಯ ಪರವಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇವೆ" ಎಂದು ಹೇಳಿದರು.

ಕೃತಗ್ಯತಾ ಟ್ರಸ್ಟ್ ಹಲವು ಸಾಮಾಜಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳ ಮೂಲಕ ಗ್ರಾಮೀಣ ಪ್ರದೇಶಗಳ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಕೈಜೋಡಿಸುತ್ತಿದ್ದು, ಶಾಲಾ ಪರಿಸರ ಸುಧಾರಣೆಗೆ ವಿಶೇಷ ಗಮನ ಹರಿಸುತ್ತಿದೆ. ಶಾಲೆಯ ನವೀಕರಣದಿಂದ ವಿದ್ಯಾರ್ಥಿಗಳಿಗೆ ಸ್ವಚ್ಛ, ಆಕರ್ಷಕ ಮತ್ತು ಸಕಾರಾತ್ಮಕ ವಾತಾವರಣ ಲಭಿಸಿರುವುದು ಗಮನಾರ್ಹವಾಗಿದೆ.

ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕ-ಶಿಕ್ಷಕಿಯರು, ಅತಿಥಿ ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು, ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶಾಲೆ ಹೊಸ ಬಣ್ಣದ ಮೆರಗು ಪಡೆದ ಹಿನ್ನೆಲೆಯಲ್ಲಿ ಮಕ್ಕಳು ಹರ್ಷಭರಿತರಾಗಿ ಸಂಭ್ರಮಿಸಿದರು. ಗ್ರಾಮಸ್ಥರು ಹಾಗೂ ಪಾಲಕರು ಕೃತಗ್ಯತಾ ಟ್ರಸ್ಟ್‌ನ ಸಾಮಾಜಿಕ ಸೇವೆಗೆ ಕೃತಜ್ಞತೆ ಸಲ್ಲಿಸಿದರು.

### ದೇಶದಲ್ಲಿನ 140 ಕೋಟಿ ಜನರು ನಿತ್ಯದ ಆಹಾರಕ್ಕಾಗಿ ರೈತನನ್ನೇ ಅವಲಂಭಿಸಿದ್ದಾರೆ, ನಾವು ರೈತನನ್ನು ದೇವರ ಸ್ವರೂಪದಂತೆ ನಿತ್ಯ ಸ್ಮರಿಸಿಕೊಳ್ಳಬೇಕು: ಡಾ.ಎ.ಆರ್ ಕುರುಬರ

ಕ್ಷೇತ್ರದಲ್ಲಿನ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಕಲ್ಮಠ ಶ್ರೀ ವಿರೂಪಾಕ್ಷೇಶ್ವರ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಪ್ರಾಚಾರ್ಯರಾದ ಡಾ.ಜೀವನೇಶ್ವರಯ್ಯ, ಟಿ.ಎ.ಪಿ.ಸಿ.ಎಂ.ಸಿ. ಅಧ್ಯಕ್ಷರಾದ ತಿಮ್ಮರೆಡ್ಡಿ ಭೋಗವಾತಿ,ತಾ.ಸಹಾಯಕ ಕೃಷಿ ನಿರ್ದೇಶಕರಾದ ಗುರುನಾಥ ಭೂಸನೂರ,ಅ.ಭಾ.ವೀ.ಲಿಂ.ಮಹಾಸಭಾ ಜಿಲ್ಲಾಧ್ಯಕ್ಷರಾದ ಚಂದ್ರಶೇಖರ ಮಿರ್ಜಾಪುರ್,ತಾ,ಅಧ್ಯಕ್ಷರಾದ ಅರುಣಚಂದಾ,ರಾಜ್ಯ ಕಾರ್ಯಕಾರಣಿ ಸದಸ್ಯರಾದ ಸಿದ್ದಲಿಂಗಪ್ಪ ವಕೀಲರು, ತಾ.ವೀರಶೈವಲಿಂಗಾಯತ ಸಮಾಜದ ಅಧ್ಯಕ್ಷರಾದ ಹರಿಹರ ಪಾಟೀಲ್,ಗೌ.ಅಧ್ಯಕ್ಷರಾದ ಶ್ರೀಧರಸ್ವಾಮಿ, ಹಿರಿಯ ವರದಿಗಾರರಾದ ಬಸವರಾಜ ಭೋಗವತಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಕಾರ್ಯದರ್ಶಿ ಸೂಗೂರಯ್ಯ ಆರ್.ಎಸ್.ಮಠ, ಜಿಲ್ಲಾಧ್ಯಕ್ಷರಾದ ಪ್ರಭಾಕರ್ ಪಾಟೀಲ್, ಜಿಲ್ಲಾ ಕಾರ್ಯದರ್ಸೀ ಬಸವನಗೌಡ ಮಲ್ಲಿನ ಮಡಗು, ಜಿಲ್ಲಾ ಪ್ರ.ಕಾರ್ಯದರ್ಶಿ ಲಿಂಗರೆಡ್ಡಿ ಪಾಟೀಲ್ , ತಾ.ಅಧ್ಯಕ್ಷರಾದ ಸಿದ್ದಯ್ಯಸ್ವಾಮಿ,ತಾ.ಗೌ.ಅಧ್ಯಕ್ಷರಾದ ಚಾಮರಸ ಪಾಟೀಲ್, ತಾ.ಕಾರ್ಯದರ್ಶಿ ಅಮರೇಶ ಅಲ್ದಾಳ್ ಸೇರಿದಂತೆ ಜಿಲ್ಲೆಯ ವಿವಿಧ ತಾಲೂಕುಗಳ ರೈತರು ಭಾಗವಹಿಸಿದರು. ಮಯೂರಿ ನೃತ್ಯ ಕಲಾ ತಂಡದ ವಿದ್ಯಾರ್ಥಿಗಳಿಂದ ನೃತ್ಯ ಪ್ರದರ್ಶನ ನಡೆಯಿತು.

ಕೃ.ವಿ.ವಿ.ರಾಯಚೂರು,ಕೃಷಿ ಇಲಾಖೆ, ಬಸವ ಕೈಗಾರಿಕ ಸಂಸ್ಥೆ,ಸ್ಟಪಿಂಗ್ ಸ್ಟೋನ್ ಶಿಕ್ಷಣ ಸಂಸ್ಥೆ, ಸೇರಿದಂತೆ ತಾಲೂಕಿನ ವಿವಿಧ ಕೃಷಿ ಪರಿಕರಗಳ ತಾಯಾರಿಕ ಸಂಸ್ಥೆಗಳವರಿಂದ ನಡೆದ ಕೃಷಿ ವಸ್ತು ಪ್ರದರ್ಶನ ರೈತರ ಗಮನ ಸೆಳೆಯಿತು.

## ಸಮಾಜದ ಒಗ್ಗಟ್ಟಿಗೆ ಜಾತ್ರೆಗಳು ಸೇತುವೆ: ಮಾಗನೂರ



**ಯಾದಗಿರಿ:ಫೆ.12**–ಗ್ರಾಮೀಣ ಸಂಸ್ಕೃತಿ, ಸಂಪ್ರದಾಯಗಳು ಹಾಗೂ ಜಾತ್ರಾ ಮಹೋತ್ಸವಗಳು ನಮ್ಮ ನೆಲದ ಆತ್ಮಸ್ಪಂದನ. ಇಂತಹ ಧಾರ್ಮಿಕ-ಸಾಂಸ್ಕೃತಿಕ ಆಚರಣೆಗಳನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಚಂದ್ರಶೇಖರಗೌಡ ಮಾಗನೂರ ಹೇಳಿದರು.

ತಾಲ್ಲೂಕಿನ ಟಿ. ವಡಗೇರಾ ಹಾಗೂ ಕಿರಿ ಹೈಯಾಳ ಗ್ರಾಮಗಳಲ್ಲಿ ಆಯೋಜಿಸಿದ್ದ ಗ್ರಾಮ ದೇವತೆಗಳ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಅವರು ಮಾತನಾಡಿದರು. ಗ್ರಾಮ ದೇವತೆಗಳ ಆಶೀರ್ವಾದ ಪಡೆಯುವುದು ಭಾಗ್ಯಕರ ಸಂಗತಿ ಎಂದರು.

ಈ ವೇಳೆ ಎರಡೂ ಗ್ರಾಮಗಳ ಬಿಜೆಪಿ ಕಾರ್ಯಕರ್ತರ ಮನೆಗಳಿಗೆ ಭೇಟಿ ನೀಡಿ ಕುಟುಂಬ ಸದಸ್ಯರೊಂದಿಗೆ ಆತ್ಮೀಯವಾಗಿ ಮಾತುಕತೆ ನಡೆಸಿ ಅವರ ಯೋಗಕ್ಷೇಮ ವಿಚಾರಿಸಿದರು. ಪಕ್ಷ ಸಂಘಟನೆ ಮತ್ತಷ್ಟು ಬಲಿಷ್ಠಗೊಳಿಸುವುದು, ಯುವಕರು ಮತ್ತು ಮಹಿಳೆಯರನ್ನು ಸಕ್ರಿಯವಾಗಿ ಸಂಘಟನೆಯೊಂದಿಗೆ ಸಂಪರ್ಕಿಸುವುದು ಹಾಗೂ ಸ್ಥಳೀಯ ಸಮಸ್ಯೆಗಳಿಗೆ ಶೀಘ್ರ ಸ್ಪಂದಿಸುವ ಬಗ್ಗೆ ಕಾರ್ಯಕರ್ತರೊಂದಿಗೆ ಚರ್ಚೆ ನಡೆಸಿದರು.

ಗ್ರಾಮಾಭಿವೃದ್ಧಿಗೆ ಸಂಬಂಧಿಸಿದಂತೆ ರಸ್ತೆ ಸುಧಾರಣೆ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ದೇವಸ್ಥಾನಗಳ ಮೂಲಸೌಕರ್ಯ ವೃದ್ಧಿ, ಯುವಕರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ಹಾಗೂ ಸ್ವಯಂ ಉದ್ಯೋಗಾವಕಾಶಗಳ ಸೃಷ್ಟಿ ಕುರಿತಂತೆ ಗ್ರಾಮಸ್ಥರಿಂದ ಅಭಿಪ್ರಾಯಗಳನ್ನು ಸಂಗ್ರಹಿಸಿದರು. ಸರ್ಕಾರದ ಜನಪರ ಯೋಜನೆಗಳನ್ನು ಮನೆಮನೆಗೆ ತಲುಪಿಸುವುದಾಗಿ ಭರವಸೆ ನೀಡಿದರು.

ಜನರೊಂದಿಗಿನ ನೇರ ಸಂಪರ್ಕವೇ ಸಾರ್ವಜನಿಕ ಜೀವನದ ನಿಜವಾದ ಬಲ. ಕಾರ್ಯಕರ್ತರ ಮನೆಬಾಗಿಲಿಗೆ ತೆರಳಿ ಅವರ ನೋವು-ನಲಿವು ಆಲಿಸುವುದು ಸೇವಾ ಮನೋಭಾವದ ಪ್ರತೀಕ ಎಂದು ಮಾಗನೂರ ಹೇಳಿದರು. ಗ್ರಾಮೀಣ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳು ಉಳಿದರೆ ಸಮಾಜದಲ್ಲಿ ಐಕ್ಯತೆ, ಪರಸ್ಪರ ವಿಶ್ವಾಸ ಇನ್ನಷ್ಟು ಗಟ್ಟಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರು, ಕಾರ್ಯಕರ್ತರು, ಯುವಕರು ಹಾಗೂ ಮಹಿಳೆಯರು ಉಪಸ್ಥಿತರಿದ್ದು ಜಾತ್ರಾ ಕಾರ್ಯಕ್ರಮವನ್ನು ಸಂಭ್ರಮದಿಂದ ಆಚರಿಸಿದರು.

# ದೆಹಲಿಯಲ್ಲಿ ಡಿಕೆಶಿ-ರಾಹುಲ್ ಭೇಟಿ : ಸಿಎಂ ಸ್ಥಾನಕ್ಕೆ ಪಟ್ಟು

ಎಂಬ ಭರವಸೆಯನ್ನು ರಾಹುಲ್, ಸೋನಿಯಾಗಾಂಧಿ ಅವರು ಶಿವಕುಮಾರ್ ಅವರಿಗೆ ನೀಡಿದರು ಎಂದು ಹೇಳಲಾಗಿದೆ.

ಎರಡು ದಿನಗಳ ಹಿಂದೆ ಕಾಂಗ್ರೆಸ್‌ನ ದೊಡ್ಡ ನಾಯಕರು ಕರೆದಿದ್ದಾರೆ ಎಂದು ದೆಹಲಿಗೆ ತೆರಳಿದ್ದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಾಹುಲ್‌ಗಾಂಧಿ ಭೇಟಿಗೆ ದೆಹಲಿಯಲ್ಲಿ ಕಾದು ಕುಳಿತಿದ್ದರು. ನಿನ್ನೆ ರಾಹುಲ್ ಅವರನ್ನು ಭೇಟಿ ಮಾಡುವ ಪ್ರಯತ್ನ ಸಾಧ್ಯವಾಗಿರಲಿಲ್ಲ. ಆದರೆ ಇಂದು ಬೆಳಗ್ಗೆಯೇ ಡಿ.ಕೆ. ಶಿವಕುಮಾರ್, ರಾಹುಲ್ ಅವರನ್ನು ಭೇಟಿ ಮಾಡಿ, ಚರ್ಚೆ ನಡೆಸಿದರುದೆಹಲಿಯ ಜನಪತ್ ರಸ್ತೆಯಲ್ಲಿರುವ ಸೋನಿಯಾಗಾಂಧಿ ಅವರ ನಿವಾಸದಲ್ಲಿ ಇಂದು ಬೆಳಗ್ಗೆ 10.30ರ ಸುಮಾರಿಗೆ ರಾಹುಲ್‌ಗಾಂಧಿ ಅವರನ್ನು ಶಿವಕುಮಾರ್ ಭೇಟಿ ಮಾಡಿ ಚರ್ಚಿಸಿದರು.

ಸೋನಿಯಾಗಾಂಧಿ ಅವರ ನಿವಾಸದಲ್ಲಿ ನಡೆದ ಈ ಚರ್ಚೆಯಲ್ಲಿ ರಾಹುಲ್‌ಗಾಂಧಿ, ಸೋನಿಯಾಗಾಂಧಿ ಹಾಗೂ ಪ್ರಿಯಾಂಕ ಗಾಂಧಿ ಸಹ ಉಪಸ್ಥಿತರಿದ್ದರು.

ಈ ಮೂವರು ಕಾಂಗ್ರೆಸ್‌ನ ವರಿಷ್ಠ ನಾಯಕರು ಡಿ.ಕೆ.ಶಿವಕುಮಾರ್ ಅವರ ಜತೆ ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ಚರ್ಚೆ ನಡೆಸಿದ್ದು, ರಾಜಕೀಯವಾಗಿ ಕುತೂಹಲಕ್ಕೆ ಕಾರಣವಾಗಿದೆ.

ಪಕ್ಷಕ್ಕಾಗಿ ನಾನು ದುಡಿದ್ದೇನೆ. ನನ್ನ ದುಡಿಮೆ ಶ್ರಮಕ್ಕೆ ವರಿಷ್ಠರ ಬಳಿ ಕೂಲಿ ಕೇಳುತ್ತೇನೆ ಎಂದು ಹಿಂದೆಯೇ ಹಲವಾರು ಬಾರಿ ಹೇಳಿದ್ದ ಡಿ.ಕೆ. ಶಿವಕುಮಾರ್, ಇಂದು ವರಿಷ್ಠರ ಮುಂದೆ ಮನಬಿಚ್ಚಿ ಮಾತನಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನವದೆಹಲಿಯ 10 ಜನಪಥ್‌ನಲ್ಲಿ ಕಾಂಗ್ರೆಸ್ ನಾಯಕಿ, ಸಂಸದೆ ಪ್ರಿಯಾಂಕಾ ವಾದ್ರಾ ಅವರನ್ನು ಉಪಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್‌ರವರು ಭೇಟಿ ಮಾಡಿ ಹೊರ ಬರುತ್ತಿರುವುದು. ಛತ್ತೀಸ್‌ಘಡದ ಮಾಜಿ ಮುಖ್ಯಮಂತ್ರಿ ಮತ್ತಿತರ ಮುಖಂಡರು ಇದ್ದಾರೆ

ರಾಜ್ಯದಲ್ಲಿ 2028 ಕ್ಕೆ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುವ ಸಂಕಲ್ಪ ತಮ್ಮದಾಗಿದೆ. ಹಾಗಾಗಿ ಅಧಿಕಾರ ಹಂಚಿಕೆಯ ಒಪ್ಪದದಂತೆ ತಮಗೂ ಅವಕಾಶ ಕೊಡಿ ಎಂದು ಡಿ.ಕೆ. ಶಿವಕುಮಾರ್ ಸೋನಿಯಾಗಾಂಧಿ, ರಾಹುಲ್‌ಗಾಂಧಿ ಹಾಗೂ ಪ್ರಿಯಾಂಕ ಗಾಂಧಿ ಅವರ ಬಳಿ ಮನವಿ ಪೂರ್ವಕ ಬೇಡಿಕೆ ಇಟ್ಟಿದ್ದಾರೆ ಎಂದು ಶಿವಕುಮಾರ್ ಅವರ ಆಪ್ತ ಮೂಲಗಳು ಹೇಳಿವೆ.ವರಿಷ್ಠರ ಮಾತಿನಿಂದ ಶಿವಕುಮಾರ್ ಸಮಾಧಾನಗೊಂಡಿದ್ದು, ಆದಷ್ಟು ಬೇಗ ವರಿಷ್ಠರು ಸಹ ಒಂದು ತೀರ್ಮಾನ ಪ್ರಕಟಿಸುವ ಸಾಧ್ಯತೆ ಇದೆ.

**ರಾತ್ರಿ ಖರ್ಗೆ**–ವೇಣು ಭೇಟಿ–ದೆಹಲಿಯಲ್ಲಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಿನ್ನೆ ತಡ ರಾತ್ರಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನಖರ್ಗೆ ಹಾಗೂ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ತಮ್ಮ ಬೇಡಿಕೆಯನ್ನು ಇಟ್ಟಿದ್ದರಲ್ಲದೆ, ರಾಹುಲ್‌ಗಾಂಧಿ ಅವರ ಭೇಟಿಗೆ ಸಮಯ ನಿಗದಿ ಮಾಡುವಂತೆ ಕೋರಿದ್ದರು.

ಶಿವಕುಮಾರ್ ಜತೆ ಅವರ ಸಹೋದರ ಮಾಜಿ ಸಂಸದ ಡಿ.ಕೆ.ಸುರೇಶ್ ಸಹ ಖರ್ಗೆ ಭೇಟಿ ಸಂದರ್ಭದಲ್ಲಿ ಇದ್ದು, ಸುಮಾರು ಹೊತ್ತು ಈ ಇಬ್ಬರೂ ಖರ್ಗೆ ಹಾಗೂ ವೇಣುಗೋಪಾಲ್ ಜತೆ ರಾಜಕೀಯ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿದರು ಎನ್ನಲಾಗಿದೆ.ಎಐಸಿಸಿ ಅಧ್ಯಕ್ಷ ಖರ್ಗೆ ಅವರ ಭೇಟಿ ಮಾತುಕತೆ ನಂತರ ಡಿ.ಕೆ. ಶಿವಕುಮಾರ್ ಇಂದು ರಾಹುಲ್‌ಗಾಂಧಿ ಅವರನ್ನು ಭೇಟಿ ಮಾಡಿದ್ದು, ಹೈಕಮಾಂಡ್ ಮುಂದಿನ ದಿನಗಳಲ್ಲಿ ಯಾವ ತೀರ್ಮಾನ ಕೈಗೊಳ್ಳಲಿದೆ ಎಂಬುದು ಕುತೂಹಲ ಮೂಡಿಸಿದೆ.

**ವರಿಷ್ಠರಿಗೆ ಎಲ್ಲವನ್ನೂ ಹೇಳಿದ್ದೇನೆ: ಡಿಕೆಶಿ–** ಪಕ್ಷದ ವರಿಷ್ಠರ ಜತೆ ಏನೇನು ಮಾತನಾಡಬೇಕೋ ಅದೆನ್ನೆಲ್ಲಾ ಮಾತನಾಡಿದ್ದೇನೆ. ನಾನು ದೆಹಲಿಗೆ ಬಂದಿರುವುದೇ ರಾಜಕಾರಣ ಮಾಡಲು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ದೆಹಲಿಯ ಜನಪಥ್ ರಸ್ತೆಯಲ್ಲಿರುವ ಸೋನಿಯಾಗಾಂಧಿಯವರ ನಿವಾಸದಲ್ಲಿ ಇಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ಅಧಿನಾಯಕಿ ಪ್ರಿಯಾಂಕಾಗಾಂಧಿ ಜತೆ ಮಹತ್ವದ ರಾಜಕೀಯ ಚರ್ಚೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ ಅವರು, ವರಿಷ್ಠರಿಗೆ ಏನು ಹೇಳಬೇಕೋ ಅದೆನ್ನೆಲ್ಲಾ ಹೇಳಿದ್ದೇನೆ. ಎಲ್ಲ ರಾಜಕೀಯ ವಿದ್ಯಮಾನಗಳನ್ನು ತಿಳಿಸಿದ್ದೇನೆ ಎಂದರು.

ಅಸ್ಸಾಂನಲ್ಲಿ ಚುನಾವಣೆ ಇದೆ. ಅಲ್ಲ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರುವ ಬಗ್ಗೆ ಅಸ್ಸಾಂ ಕಾಂಗ್ರೆಸ್ ನಾಯಕರ ಜತೆ ಸೋನಿಯಾಗಾಂಧಿ ಅವರ ನಿವಾಸದಲ್ಲಿ ಎಲ್ಲರ ಜತೆ ಮಾತನಾಡಿದ್ದೇನೆ. ಯಾರ ಜತೆಗೆಲ್ಲಾ ಮಾತನಾಡಿ, ಏನು ಮಾತನಾಡಿದೆ ಎಂಬುದನ್ನು ಬೀದಿಯಲ್ಲಿ ನಿಂತು ಮಾತನಾಡುವ ಅಗತ್ಯ ಇಲ್ಲ ಎಂದರು.

ನಾನು ದೆಹಲಿಗೆ ಬಂದಿರುವುದೇ ರಾಜಕಾರಣ ಮಾಡುವುದಕ್ಕೆ ಹಾಗಾಗಿ ವರಿಷ್ಠರಿಗೆ ಏನೇನು ಹೇಳಬೇಕೋ ಎಲ್ಲವನ್ನು ಹೇಳಿದ್ದೇನೆ. ಎಲ್ಲದಕ್ಕೂ ಕಾಲವೇ ಉತ್ತರ ಕೊಡಲಿದೆ ಎಂದು ಮಾರ್ಮಿಕವಾಗಿ ಹೇಳಿ, ವರಿಷ್ಠರ ಜತೆಗೆನ ಮಾತುಕತೆಯ ಗುಟ್ಟನ್ನು ಬಿಟ್ಟು ಕೊಡಲಿಲ್ಲ.

# ನಾಲ್ವರು ಭ್ರಷ್ಟರು ಲೋಕಾ ಬಲೆಗೆ,ಅಕ್ರಮ ಆಸ್ತಿ ಪತ್ತೆ









**ಬೆಂಗಳೂರು,ಫೆ.12**–ಬೆಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ದಾವಣಗೆರೆಯಲ್ಲಿ ಏಕಕಾಲಕ್ಕೆ ದಾಳಿ ನಡೆಸಿರುವ ಲೋಕಾಯುಕ್ತ ಅಧಿಕಾರಿಗಳು ನಾಲ್ವರು ಭ್ರಷ್ಟ ಅಧಿಕಾರಿಗಳನ್ನು ಬಲೆಗೆ ಕೆಡವಿ ಕೋಟ್ಯಂತರ ಮೌಲ್ಯದ ಅಕ್ರಮ ಆಸ್ತಿಪಾಸ್ತಿ ಪತ್ತೆಹಚ್ಚಿದ್ದಾರೆ.ಬೆಂಗಳೂರು ಗ್ರಾಮಾಂತರದ ಕರ್ನಾಟಕ ರೆಸಿಡೆನ್ಸಿಯಲ್ ಎಜುಕೇಷನಲ್ ಇನ್ಸಿಟ್ಯೂಷನ್ ಸೊಸೈಟಿ ಸೂಪರಟೆಂಡೆಂಟ್ ಇಂಜಿನಿಯರ್ ಹೆಚ್ ಎಂ ಜನಾರ್ದನ್,ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ಮುಖ್ಯ ಇಂಜಿನಿಯರ್ ಪುರುಷೋತ್ತಮ ದಾಸ್ ಹೆಗಡೆ,ದಾವಣಗೆರೆಯ ಬೆಸ್ಕಾಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅರ್ಜುನ ಆರ್.ಹೆಚ್ ಹಾಗೂ ಧಾರವಾಡದ ಭೂದಾಖಲೆಗಳ ಸರ್ವೆಯರ್ ಸೋಮಲಿಂಗಪ್ಪ ಲೋಕಾಯುಕ್ತ ಬಲೆಗೆ ಬಿದ್ದ ಅಧಿಕಾರಿಗಳಾಗಿದ್ದಾರೆ.

ಲೋಕೋಪಯೋಗಿ ಮುಖ್ಯ ಇಂಜಿನಿಯರ್ ಪುರುಷೋತ್ತಮ ದಾಸ್ ಕಚೇರಿ ಮನೆ ಸೇರಿ 11 ಕಡೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಹೆಚ್ ಎಂ ಜನಾರ್ದನ್ ಅವರ ಕಚೇರಿ ಮನೆ ಮೇಲೆ ಬೆಳಿಗ್ಗೆಯಿಂದ ದಾಳಿ ನಡೆಸಿ ಅಕ್ರಮ ಆಸ್ತಿ ಪಾಸ್ತಿ ಪತ್ತೆಹಚ್ಚಿದ್ದಾರೆ.

ಮೈಸೂರಿನಲ್ಲಿ 5 ಕಡೆ, ಬೆಂಗಳೂರಿನಲ್ಲಿ 6 ಕಡೆ ದಾಳಿ ನಡೆಸಿದ್ದು, ಮಹತ್ವದ ದಾಖಲೆಗಳಿಗಾಗಿ ಶೋಧ ನಡೆಸಿದ್ದಾರೆ.

ಬೆಸ್ಕಾಂ ಇಂಜಿನಿಯರ್ ಆರ್.ಹೆಚ್ ಅರ್ಜುನ್ ಅವರ ಮನೆ ಹಾಗೂ ಕಚೇರಿ ಮೇಲೂ ಲೋಕಾಯುಕ್ತ ಅಧಿಕಾರಿಗಳ ತಂಡ ದಾಳಿ ನಡೆಸಿದೆ.ದಾವಣಗೆರೆಯ ಬೆಸ್ಕಾಂನ ಸಿವಿಲ್ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಜುನ್ ವಿರುದ್ಧ ಆದಾಯ ಮೀರಿ ಅಪಾರ ಪ್ರಮಾಣದ ಆಸ್ತಿ ಗಳಿಸಿರುವ ಆರೋಪ ಕೇಳಿಬಂದಿತ್ತು. ಈ ಹಿನ್ನೆಲೆ ಲೋಕಾಯುಕ್ತ ಎಸ್ಪಿ ಎಂಎಸ್ ಕೌಲಾಪುರೆ ನೇತೃತ್ವದ ತಂಡ ದಾಳಿ ನಡೆಸಿದೆ.ಅರ್ಜುನ್ ವಾಸವಿದ್ದ ದಾವಣಗೆರೆ ನಗರದ ನಿಟ್ಟುವಳ್ಳಿನಲ್ಲಿ ರೂಮ್, ಕಚೇರಿ ಹಾಗೂ ಶಿವಮೊಗ್ಗದ ಮನೆಯ ಮೇಲೆ ಏಕ ಕಾಲಕ್ಕೆ ದಾಳಿ ನಡೆಸಲಾಗಿದೆ.

ಶಿವಮೊಗ್ಗದ ಮನೆಯಲ್ಲಿ ಆಸ್ತಿ ಪತ್ರ ಹಾಗೂ ಚಿನ್ನ ಬೆಳ್ಳಿ ಪತ್ತೆಯಾಗಿದ್ದು, ಇನ್ನಷ್ಟು ಮಹತ್ವದ ದಾಖಲೆಗಳನ್ನ ಪತ್ತೆಹಚ್ಚಲು ಅಧಿಕಾರಿಗಳು ಶೋಧ ಮುಂದುವರಿಸಿದ್ದಾರೆ.

ಶಿವಮೊಗ್ಗದ ವಿಜಯನಗರ ಹಾಗೂ ಗೋಪಾಲಗೌಡ ಬಡಾವಣೆಯಲ್ಲಿರುವ ಅವರ ನಿವಾಸಗಳ ಮೇಲೆ ಅಧಿಕಾರಿಗಳ ತಂಡ ದಾಳಿ ಮಾಡಿದೆ.ಸಾಗರ ಆನಂದಪುರ ಸಮೀಪದ ತಳಲೆ ಗ್ರಾಮದಲ್ಲಿರುವ ಅರ್ಜುನ ಅವರಿಗೆ ಸೇರಿದ 2.5 ಎಕರೆ ಮತ್ತು 4.5 ಎಕರೆ ವಿಸ್ತೀರ್ಣದ ಬೃಹತ್ ಫಾರ್ಮ್ ಹೌಸ್‌ಗಳ ಮೇಲೂ ಅಧಿಕಾರಿಗಳು ದಾಳಿ ಇಟ್ಟಿದ್ದಾರೆ. ಲೋಕಾಯುಕ್ತ ಡಿವೈಎಸ್ಪಿ ಚಂದ್ರಶೇಖರ್, ಇನ್ಸೆಕ್ಟರ್‌ಗಳಾದ ಪ್ರಭು ಸೂರೇನ್ ಮತ್ತು ಗುರುರಾಜ್ ಮೈಲಾರಿ ನೇತೃತ್ವದಲ್ಲಿ ಈ ಕಾರ್ಯಾಚರಣೆ ನಡೆಯುತ್ತಿದ್ದು, ಮಹತ್ವದ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ.

ಸರ್ವೆ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಸೋಮಲಿಂಗಪ್ಪ ಸಿದ್ದನಗೌಡರ್ ಅವರ ನಿವಾಸಗಳ ಮೇಲೆ ದಾಳಿ ನಡೆದಿದೆ.ಧಾರವಾಡದ ಮುರಗೋಡ್ ನಿವಾಸ, ಭಾರತಿ ನಗರದ ನಿವಾಸ ಹಾಗೂ ಎಡಿಎಲ್‌ಆರ್ ಕಚೇರಿಯಲ್ಲಿ ಲೋಕಾಯುಕ್ತ ಪೊಲೀಸರು ತಪಾಸಣೆ ನಡೆಸುತ್ತಿದ್ದಾರೆ. ಲೋಕಾಯುಕ್ತ ಎಸ್ಪಿ ಸಿದ್ದಲಿಂಗಪ್ಪ ನೇತೃತ್ವದಲ್ಲಿ ಈ ಕಾರ್ಯಾಚರಣೆ ನಡೆಯುತ್ತಿದ್ದು, ಆಸ್ತಿ ವಿವರಗಳ ಕುರಿತು ಮಾಹಿತಿ ಕಲೆಹಾಕಲಾಗುತ್ತಿದೆ.

**ಬಲೆಗೆ ಬಿದ್ದವರು**

*ಹೆಚ್ ಎಂ ಜನಾರ್ದನ್ ಸೂಪರಟೆಂಡೆಂಟ್ ಇಂಜಿನಿಯರ್ ಕೆಆರ್ ಇಐಎಸ್ ಬೆಂಗಳೂರು ಗ್ರಾಮಾಂತರ

*ಪುರುಷೋತ್ತಮ ದಾಸ್ ಹೆಗಡೆ ಮುಖ್ಯ ಇಂಜಿನಿಯರ್ ಲೋಕೋಪಯೋಗಿ ಬೆಂಗಳೂರು

*ಅರ್ಜುನ ಆರ್.ಹೆಚ್ ಎಇಇ ಬೆಸ್ಕಾಂ ದಾವಣಗೆರೆ

*ಸೋಮಲಿಂಗಪ್ಪ ಸರ್ವೆಯರ್ ಧಾರವಾಡ

ಯುವ ಮಾರ್ಗ www.yuvamarga.com Yuva Marga yuva_marga_

# ವರುಣ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ನಿರಂತರ: ಡಾ.ಯತೀಂದ್ರ ಸಿದ್ದರಾಮಯ್ಯ

**ತಿ.ನರಸೀಪುರ ಫೆ.12:–** ಅಭಿವೃದ್ಧಿ ಕಾಮಗಾರಿಗಳು ನಿರಂತರ ಪ್ರಕ್ರಿಯೆಯಾಗಿರುವುದರಿಂದ ಹೊಸ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮೂಲಕ ವರುಣ ವಿಧಾನಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ ಎಂದು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ವರುಣ ವಿಧಾನ ಸಭಾ ಕ್ಷೇತ್ರದ ತಾಲೂಕಿನ ರಂಗಸಮುದ್ರ ಗ್ರಾಮದಲ್ಲಿ ಜನ ಸಂಪರ್ಕ ಸಭೆಯನ್ನು ನಡೆಸಿ, ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು ಅಭಿವೃದ್ಧಿ ಕಾಮಗಾರಿ ಎಂಬುದು ಒಂದು ನಿರಂತರ ಪ್ರಕ್ರಿಯೆಯಾಗಿದೆ. ಕ್ಷೇತ್ರದಲ್ಲಿ ನಿರಂತರವಾಗಿ ಅಭಿವೃದ್ಧಿ ಕಾಮಗಾರಿ ಮಾಡಿದ್ದರೂ ಸಣ್ಣ ಪುಟ್ಟ ಕಾಮಗಾರಿಗಳು ಬಾಕಿ ಉಳಿದುಕೊಳ್ಳುವುದು ಸಹಜ.ಸರ್ಕಾರ ಹೊಸ ಹೊಸ ಕಾಮಗಾರಿಗೆ ಹಣ ಬಿಡುಗಡೆ ಮಾಡುತ್ತಿದೆ.ಕಾಮಗಾರಿಗಳೂ ಹೊಸದಾಗಿರುತ್ತವೆ.ಕ್ಷೇತ್ರಕ್ಕೆ ಅಗತ್ಯವಿರುವ ಕಾಮಗಾರಿಗಳನ್ನು ಆದ್ಯತೆ ಮೇಲೆ ಪೂರ್ಣಗೊಳಿಸಲು ಅನುದಾನ ಬಳಕೆ ಮಾಡಲಾಗುತ್ತದೆ ಎಂದರು.

ರಂಗಸಮುದ್ರ ಪಂಚಾಯ್ತಿ ವ್ಯಾಪ್ತಿಗೆ ಬರುವ ಪ್ರತಿಯೊಂದು ಹಳ್ಳಿಯಲ್ಲಿ ಗ್ರಾಮಸ್ಥರನ್ನು ನೇರವಾಗಿ ಭೇಟಿ ಮಾಡಿ ಸಮಸ್ಯೆ ತಿಳಿದುಕೊಂಡು ಆದಷ್ಟು ಬೇಗ ಪರಿಹಾರ ಕಂಡು ಹಿಡಿಯುವ ಪ್ರಯತ್ನ ಮಾಡಲಾಗುತ್ತಿದೆ. ಹುನುಗನಹಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಯ ಒಂದು ಕೊಠಡಿ ನಿರ್ಮಾಣಕ್ಕೆ 13.90 ಲಕ್ಷ,ಹಿರಿಯ ಪ್ರಾಥಮಿಕ ಶಾಲೆಗೆ 15 ಲಕ್ಷ, ಶಾಲಾ ಸಭಾಂಗಣಕ್ಕೆ 3 ಲಕ್ಷ,ಹಾಲು ಉತ್ಪಾದಕರ ಸಹಕಾರ ಸಂಘದ ಕೊಠಡಿ ನಿರ್ಮಾಣಕ್ಕೆ 10 ಲಕ್ಷ , ಸಾಮಾನ್ಯ ವರ್ಗದ ಬೀದಿಯ ಚರಂಡಿ ಮತ್ತು ರಸ್ತೆ ಅಭಿವೃದ್ಧಿಗೆ 20 ಲಕ್ಷ, ಪಟ್ಟಲದಮ್ಮ ದೇವಸ್ಥಾನ



ಅಭಿವೃದ್ಧಿಗೆ 5 ಲಕ್ಷ ಹಾಗು ಮಸೀದಿ ಅಭಿವೃದ್ಧಿಗೆ 10 ಲಕ್ಷ ಅನುದಾನ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ರಾಜೀವ್ ಗಾಂಧಿ ವಸತಿ ನಿಗಮದಡಿ ಮನೆ ನೀಡಿಕೆ !: ವರುಣ ಕ್ಷೇತ್ರದಲ್ಲಿ ಭಾಗಶಃ ಎಲ್ಲ ಅಭಿವೃದ್ಧಿ ಕಾಮಗಾರಿಗಳು ಆಗಿದ್ದು, ಆದಾಗ್ಯೂ ಅಭಿವೃದ್ಧಿಯಾಗದ ರಸ್ತೆಗಳನ್ನು ಸರ್ವೆ ಮಾಡಿಸಿ ಹಣ ಮಂಜೂರು ಮಾಡಿಕೊಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅಗತ್ಯವಾಗಿ ಬೇಕಿರುವ ಮನೆಗಳ ಬೇಡಿಕೆ ನೋಡಿಕೊಂಡು ರಾಜೀವ್ ಗಾಂಧಿ ವಸತಿ ನಿಗಮದಲ್ಲಿ ಮನೆ ಮಂಜೂರು ಮಾಡಿಸಿಕೊಡುತ್ತೇನೆ ಎಂದು ಭರವಸೆ ನೀಡಿದ ಯತೀಂದ್ರ ಆದರೆ ಕ್ಷೇತ್ರದಲ್ಲಿ ಆಯಾಯ ಪಂಚಾಯ್ತಿಯಲ್ಲಿ ಮನೆ ವಿತರಣೆ ಮಾಡುವುದು ಪಂಚಾಯ್ತಿಯ ಸಿಇಒ ಹಾಗು ಇಓ ಗಳು, ಯಾವ್ಯಾವ ಪಂಚಾಯ್ತಿಯಲ್ಲಿ ಎಷ್ಟು ಮನೆಗಳ ಬೇಡಿಕೆ ಇದೆ ಎಂಬುದನ್ನು ನೋಡಿಕೊಂಡು ಮನೆ ನೀಡುವ ಪ್ರಕ್ರಿಯೆ ಮಾಡಲಾಗುತ್ತದೆ.ನಾನು ಕುಳಿತು ಪಂಚಾಯ್ತಿಗಳಿಗೆ ಇಷ್ಟು ಮನೆ ಕೊಡಿ ಎಂದು ಹೇಳಲು ಬರುವುದಿಲ್ಲ, ಅದನ್ನು ಅಧಿಕಾರಿಗಳು ಮಾಡುತ್ತಾರೆ.ಹೆಚ್ಚು ಮನೆಗಳ ಬೇಡಿಕೆ ಇದ್ದಲ್ಲಿ ಅದನ್ನು ಮಾಡಿಸಿಕೊಡೋಣ ಎಂದು ಭರವಸೆ ನೀಡಿದರು.

ಪಟ್ಟೇಹುಂಡಿ ಗ್ರಾಮದಲ್ಲಿ ಕನಕ ಭವನ ನಿರ್ಮಿಸಿಕೊಡುವಂತೆ ಗ್ರಾಮಸ್ಥರು ಸಲ್ಲಿಸಿದ ಮನವಿ ಸ್ಪಂದಿಸಿದ ಯತೀಂದ್ರ ಕೂಡಲೇ ಎಸ್ಟಿಮೇಟ್ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.ಈ ವೇಳೆ ನೂರಾರು ಮಂದಿ ಗ್ರಾಮಸ್ಥರು ವಿವಿಧ ಸಮಸ್ಯೆಗಳ ಕುರಿತಂತೆ ಶಾಸಕರಿಗೆ ಮನವಿ ಸಲ್ಲಿಸಿದರು.ಕೆಲವೊಂದು ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಹಾರ ಸೂಚಿಸಿದರೆ ಮತ್ತೆ ಕೆಲವು ಸಮಸ್ಯೆಗಳನ್ನು ಬಗೆಹರಿಸುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಳಿಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸುಜಾತ ರಂಗಸ್ವಾಮಿ ಅವರ ನಿವಾಸಕ್ಕೆ ತೆರಳಿ ಸನ್ಮಾನ ಸ್ವೀಕರಿಸಿದರು. ನಂತರ ಪ್ರೇಮ ಜಯರಾಮು ನಿವಾಸಕ್ಕೂ ಆಗಮಿಸಿ ಕುಟುಂಬದ ಸದಸ್ಯರಿಂದ ಗೌರವ ಸ್ವೀಕರಿಸಿದರು. ಪಿ ಕಾರ್ಡ್ ಬ್ಯಾಂಕ್ ಅಧ್ಯಕ್ಷ ಎಂ.ಮಹದೇವಣ್ಣ, ದೇವರತ್ನ ಫೌಂಡೇಶನ್ ಅಧ್ಯಕ್ಷ ಎಂ.ಶಿವಪ್ರಸಾದ್, ಜಿ.ಪಂ.ಮಾಜಿ ಸದಸ್ಯ ಕೆ.ಮಹದೇವ, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಅನಿಲ್ ಕುಮಾರ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೆಹುಂಡಿ ಮಹೇಶ್, ಮಾಜಿ ಅಧ್ಯಕ್ಷ ಟಿ.ಎಸ್. ಪ್ರಶಾಂತ್ ಬಾಬು, ಪುರಸಭಾ ಮಾಜಿ ಅಧ್ಯಕ್ಷರಾದ ಎನ್.ಸೋಮಣ್ಣ, ಎಸ್.ಮದನ್ ರಾಜ್, ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ. ಪ್ರಕಾಶ್, ತಾ.ಪಂ ಮಾಜಿ ಅಧ್ಯಕ್ಷ ತುಂಬಲ ಅಂದಾನಿ, ಪಿ ಎ ಸಿ ಸಿ ಎಸ್ ಮಾಜಿ ಅಧ್ಯಕ್ಷ ಅಕ್ಕಿ ರಮೇಶ್, ರಂಗಸಮುದ್ರ ಮಂಜುನಾಥ್, ಆಟೋ ನಂಜುಂಡ, ಗುತ್ತಿಗೆದಾರ ಲಿಂಗಾಮೂರ್ತಿ ಕೆಂಪಯ್ಯನಹುಂಡಿ ಆನಂದ್, ಕುಪ್ಯ ರಘು, ಗವಿ, ಮೆಲ್ಲಹಳ್ಳಿ ರವಿಗೌಡ, ಹುನುಗನಹಳ್ಳಿ ಎಚ್.ಚೆನ್ನೇಗೌಡ, ನಾರಾಯಣ, ರಾಜೇಶ್ , ರಾಮಕೃಷ್ಣ, ಕುಪ್ಯ ಪ್ರಭಾಕರ್, ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್, ತಾ.ಪಂ ಪ್ರಭಾರ ಇಓ ಡಾ.ಕೆ.ರಂಗಸ್ವಾಮಿ, ಜಿ.ಪಂ ಎ ಇ ಇ ಗಳಾದ ಕೆ.ಶಿವರಾಜು, ಪಿ.ಎನ್.ಚರಿತ, ಸಿಡಿಪಿಓ ಗೋವಿಂದರಾಜು, ಬಿಸಿಎಂ ವಿಸ್ತರಣಾಧಿಕಾರಿ ಎಂ.ರಾಜಣ್ಣ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿ ವರ್ಗದವರು ಹಾಗೂ ಗ್ರಾಮಸ್ಥರು ಉಪಸ್ಥಿರಿದ್ದರು.

# ಪೌರಕಾರ್ಮಿಕರನ್ನು ನಾವು ನಮ್ಮ ತಾಯಿಯಂತೆ ಕಾಣಬೇಕು: ಎ.ಆರ್.ಕೃಷ್ಣಮೂರ್ತಿ




**ಕೊಳ್ಳೇಗಾಲ.ಫೆ.12–** ಸಮಾಜದಲ್ಲಿ ಕೊಳಕು, ಕಸದಿಂದ ಮುಕ್ತ ಪರಿಸರವನ್ನು ನಿರ್ಮಾಣ ಮಾಡುವುದರಲ್ಲಿ ನಮ್ಮ ಪೌರಕಾರ್ಮಿಕರು ಮುಖ್ಯ ಕಾರಣ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಅವರು ಹೇಳಿದರು. ಪಟ್ಟಣದ ಸಿ ಡಿ.ಎಸ್. ಭವನದಲ್ಲಿ ಬುಧವಾರ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪೌರಕಾರ್ಮಿಕರ ಬಡಾವಣೆಯಲ್ಲಿ ರಸ್ತೆ ಅಗಲಿಕರಣ ಮಾಡಿದ್ದೇನೆ, ಇತರೆ ಜನಾಂಗದವರಂತೆ ಇವರು ಕೂಡ ವಿದ್ಯಾವಂತರಾಗಿ, ಸ್ವಾವಲಂಬಿಯಾಗಿ ಉತ್ತಮ ಜೀವನ ನಡೆಸುವಂತಾಗಬೇಕು. ಗ್ರಾಮ, ಪಟ್ಟಣ,ನಗರ, ಜಿಲ್ಲೆಗಳನ್ನು ಸ್ವಚ್ಛವಾಗಿಡಲು ಸಹಕಾರಿಯಾಗಿದ್ದಾರೆ ಬೆಳಗಿನ ಸೂಯ9ಉದಯಿಸುವ ಮೊದಲೇ ಇಡೀ ನಗರ ಪ್ರದೇಶವನ್ನು ಸ್ವಚ್ಛವಾಗಿರಿಸಿ ನಮ್ಮಗಳಿಗೆ ಉತ್ತಮ ವಾತಾವರಣವನ್ನು ನಿರ್ಮಿಸಿ, ಇಂದಿನ ಸಮಾಜದಲ್ಲಿ ಕಸದಿಂದ ಮುಕ್ತ ಪರಿಸರವನ್ನು ನಿರ್ಮಾಣ ಮಾಡುವುದರಲ್ಲಿ ನಮ್ಮ ಪೌರಕಾರ್ಮಿಕರ ಪಾತ್ರ ಮುಖ್ಯ ಕಾರಣವಾಗಿದೆ.

ಕರ್ನಾಟಕದಲ್ಲಿ ಇವತ್ತು ಮೈಸೂರು ಸಿಟಿ ನಂಬರ್.1 ಸ್ವಚ್ಛತಾ ನಗರ ಪ್ರದೇಶವಾಗಿದೆ ಎಂದರೆ ಅದಕ್ಕೆ ಮುಖ್ಯ ಕಾರಣಕರ್ತರು ನಮ್ಮ ಪೌರಕಾರ್ಮಿಕರು, ಸುತ್ತ, ಮುತ್ತಲಿನ ಪ್ರದೇಶವನ್ನು ಶುಚಿಯಾಗಿಡುವ ಜೊತೆಗೆ ನಮ್ಮಗಳಿಗೆ ಉತ್ತಮ ಗಾಳಿ,ಪರಿಸರ, ಆರೋಗ್ಯದಿಂದ ಜೀವನ ನಡೆಸಲು ಸಹಕಾರಿಯಾಗಿದ್ದಾರೆ, ಇವರಿಗೆ ನಾವು ಎಷ್ಟೆ ಕೃತಜ್ಞತೆ ಸಲ್ಲಿಸಿದರೂ ಸಾಲದೂ,ಉತ್ತಮ ಸ್ವಚ್ಛ ಸಮಾಜ ನಿರ್ಮಾಣಕ್ಕೆ ಅವರ ತ್ಯಾಗ, ಶ್ರಮ, ಬಹಳ ದೊಡ್ಡದು ನಾವೆಲ್ಲರೂ ಅವರನ್ನು ಗೌರವದಿಂದ ನಮ್ಮ ತಾಯಿಯಂತೆ ಕಾಣಬೇಕು.

ಮೈಸೂರು ಜಿಲ್ಲೆ ಮಹಾಪೌರರು ನಾರಾಯಣ ರಾಜ್ಯ ಅಧ್ಯಕ್ಷರು ನಿಮ್ಮೆಲ್ಲರ ಧ್ವನಿಯಾಗಿದ್ದಾರೆ, ರಾಜ್ಯದಲ್ಲಿ 12,692 ಜನರು ಪೌರ ಕಾರ್ಮಿಕರು ಖಾಯಂ ಆಗಿದ್ದಾರೆ ಇದಕ್ಕೆ ಮುಖ್ಯ ಕಾರಣ ನಮ್ಮ ಸರ್ಕಾರದ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಹೇಬ್ರು. ರಾಜ್ಯದಲ್ಲಿ ಕೃಷಿ ಮಾಡುವ ರೈತ ಎಷ್ಟು ಮುಖ್ಯನೂ, ದೇಶ ಕಾಯೋ ಸೈನಿಕರು ಎಷ್ಟು ಮುಖ್ಯನೂ,ಅದೇ ರೀತಿ ನಮ್ಮ ಸಮಾಜವನ್ನು ಶುಚಿ ಯಾಗಿಡುವ ಪೌರಕಾರ್ಮಿಕರು ಕೂಡ ನಮಗೆ ಬಹಳ ಮುಖ್ಯ. ಕೊಳ್ಳೇಗಾಲ ನಗರಸಭೆಯಲ್ಲಿ 36 ಜನರು ಖಾಯಂ ನೌಕರರು,23 ಜನರು ನೇರನೇಮಕಾತಿ, 22 ಜನರು ಇತರೆ ವಾಚರ್, ಸೂಪರ್‌ವೈಸಗಳಾಗಿ ಕೆಲಸ ಕಾಯ9ನಿರ್ವಹಿಸುತ್ತಿದ್ದಾರೆ.

ಒಟ್ಟು 81ಜನರಿದ್ದು ಇವರೆಲ್ಲರಿಗೂ ಆರೋಗ್ಯವಿಮೆ, 5ರಿಂದ 10 ಲಕ್ಷದವರೆಗೂ ಉಚಿತ ಚಿಕಿತ್ಸೆ ಇರುತ್ತದೆ. ಇದಲ್ಲದೆ ಒಂದು ತಿಂಗಳು ಹೆಚ್ಚುವರಿ ವೇತನವನ್ನು ನಮ್ಮ ಸರ್ಕಾರ ನೀಡುತ್ತದೆ.ಆರ್ಮುಗಂ, ಗಣೇಶ, ರಮೇಶ, ಶಿವಕುಮಾರ್, ಶರವಣ, ಸುಬ್ಬಯ್ಯ,ಸತ್ಯ, ಒಟ್ಟು 7 ಜನರು ಇವತ್ತು ಖಾಯಂ ನೌಕರರಾಗಿದ್ದಾರೆ. ಅನೇಕ ಕಡೆ ಬೆಂಗಳೂರಿನಲ್ಲಿ ನಿರುದ್ಯೋಗದ ಸಮಸ್ಯೆಯಿಂದ ಬೇರೆ ಸಮುದಾಯದ ಜನರು ಬೀದಿ ಸ್ವಚ್ಛತಾ ಕಾರ್ಯಕ್ಕೆ ಪೌರಕಾಮಿ9ಕರ ಕೆಲಸ ಮಾಡಲು ಬರುತ್ತಿದ್ದಾರೆ, ನಿಮ್ಮ ಹುದ್ದೆಗೆ ತುಂಬಾ ಮಹತ್ವ ಇದೆ. ಹಾಗಾಗಿ ನಿಮಗೆ ಗೌರವಯುತವಾಗಿ ಉತ್ತಮ ಬದುಕನ್ನು ಕಲ್ಪಿಸಿಕೊಳ್ಳಲು ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಹೆಬ್ರು ಹಣಕಾಸಿನ ಸಚಿವರಾಗಿ ನಿಮ್ಮ ಪರವಾಗಿ ಸ್ಪಂದಿಸಿದ್ದಾರೆ. ನಾನೂ ಕೂಡ ನಿಮ್ಮ ಪರವಾಗಿರುತ್ತೇನೆ ಎಂದು ಶಾಸಕರು ತಿಳಿಸಿದರು.

ಇದೇ ವೇಳೆ ಪೌರಕಾರ್ಮಿಕರಿಗೆ ಸ್ವತಃ ಊಟ ಬಡಿಸುವುದರ ಜೊತೆಗೆ ತಾವೂ ಕೂಡ ಭಾಗಿಯಾಗಿದ್ದರು. ಉತ್ತಮವಾಗಿ ಸೇವೆ ಸಲ್ಲಿಸಿದ ಪೌರಕಾರ್ಮಿಕರಿಗೆ, ನಿವೃತ್ತ ನೀರುಗಂಟಿ, ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಿದರು. ಕೀಡಾಕೂಟದಲ್ಲಿ ಭಾಗವಹಿಸಿ ಜಯಗಳಿಸಿದ್ದ ಪೌರ ಕಾರ್ಮಿಕರಿಗೆ ಬಹುಮಾನವನ್ನು ವಿತರಿಸಿದರು.

ಕಾರ್ಯಕ್ರಮದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರು ರಾಜೇಂದ್ರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ನಗರಸಭೆ ಪೌರಯುಕ್ತರು ರುದ್ರಮ್ಮ ಶರಣಯ್ಯ, ತಾ.ಪಂ.ಇಒ ಗುರುಶಾಂತಪ್ಪ ಬೆಳ್ಳುಂಡಗಿ, ನಗರಸಭೆ ಮಾಜಿ ಅಧ್ಯಕ್ಷ ರೇಖಾ ರಮೇಶ್, ನಗರಸಭೆಯ ಮಾಜಿ ಸದಸ್ಯರುಗಳು, ಪೌರಕಾರ್ಮಿಕರ ಸಂಘದ ರಾಜಣ್ಣ ಹಾಗೂ ಇತರರು ಇದ್ದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111, 9743496111

# ವಯನಾಡ್ ಜಿಲ್ಲೆಯಲ್ಲಿ ಆದಿವಾಸಿ ಜಗತ್ತಿನ ಸ್ವಾವಲಂಬನೆಯ ಕಲ್ಪನೆಗಳು ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ



**ಚಾಮರಾಜನಗರ, ಫೆ.12–** ಕೇರಳದ ವಯನಾಡ್ ಜಿಲ್ಲೆಯ ಸುಲ್ತಾನ್ ಬತ್ತೇರಿಯಲ್ಲಿ ನಡೆದ ಮಹತ್ವದ ಆದಿವಾಸಿ ಜಗತ್ತಿನಲ್ಲಿ ಸ್ವಾವಲಂಬನೆಯ ಕಲ್ಪನೆಗಳು ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಚಾಮರಾಜನಗರ ಜಿಲ್ಲೆಯನ್ನು ಜಿಲ್ಲಾಧಿಕಾರಿ ಶ್ರೀರೂಪ ಅವರು ಪ್ರತಿನಿಧಿಸಿದರು.ವಯನಾಡಿನ ಸುಲ್ತಾನ್ ಬತ್ತೇರಿಯಲ್ಲಿ ನಡೆದ ಮೂರು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿದ ಚಾಮರಾಜನಗರದ ಜಿಲ್ಲಾಧಿಕಾರಿ ಶ್ರೀರೂಪ ಅವರು ಗಡಿ ಪ್ರದೇಶದ ಆದಿವಾಸಿ ಸಮುದಾಯಗಳ ಕುರಿತು ಚರ್ಚೆಗಳಿಗೆ ಮೀಸಲಾಗಿರುವ ರಾಷ್ಟ್ರೀಯ ವೇದಿಕೆಯಲ್ಲಿ ಚಾಮರಾಜನಗರ ಜಿಲ್ಲೆಯನ್ನು ಪ್ರತಿನಿಧಿಸಿದರು.

ಕೇರಳದ ವಯನಾಡು, ತಮಿಳುನಾಡಿನ ನೀಲಗಿರಿ ಮತ್ತು ಕರ್ನಾಟಕ ರಾಜ್ಯದ ಚಾಮರಾಜನಗರ ಸಂಗಮದಲ್ಲಿ ನಡೆದ ಈ ವಿಚಾರ ಸಂಕಿರಣವು, ವಿದ್ವಾಂಸರು, ಸಂಶೋಧಕರು, ನೀತಿ ನಿರೂಪಕರು ಮತ್ತು ಆಡಳಿತಗಾರರನ್ನು ಒಟ್ಟುಗೂಡಿಸಿ ಸ್ಥಳೀಯ ಸಮುದಾಯಗಳು, ಆಡಳಿತ ಮತ್ತು ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಿತು.

ವಿಚಾರ ಸಂಕಿರಣ ಉದ್ಘಾಟಿಸಿದ ಜಿಲ್ಲಾಧಿಕಾರಿ ಶ್ರೀರೂಪ ಅವರು ಮಾತನಾಡಿ ಚಾಮರಾಜನಗರ ಜಿಲ್ಲೆಯ ಬುಡಕಟ್ಟು ಸಮುದಾಯಗಳಾದ ಸೋಲಿಗ, ಜೇನು ಕುರುಬ ಮತ್ತು ಕಾಡು ಕುರುಬ ಜನರ ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳು, ಶೈಕ್ಷಣಿಕ ಸವಾಲುಗಳು, ಜೀವನೋಪಾಯದ ಕಾಳಜಿಗಳು ಮತ್ತು ಅರಣ್ಯ ಅವಲಂಬಿತ ಪ್ರದೇಶಗಳಲ್ಲಿ ವಾಸಿಸುವ ವಾಸ್ತವ ಕುರಿತು ವ್ಯಾಪಕವಾಗಿ ವಿವರಿಸಿದರು.

ಆದಿವಾಸಿ ಅಭಿವೃದ್ಧಿಯ ಕುರಿತು ಅರ್ಥಪೂರ್ಣ ಚರ್ಚೆಗಳು ಕ್ಷೇತ್ರದಲ್ಲಿ ವಾಸ್ತವವಾಗಿ ಅನುಷ್ಠಾನವಾಗಬೇಕಿದೆ. ಆಡಳಿತಾತ್ಮಕ ಅನುಭವ ಮತ್ತು ಸಮುದಾಯದ ಧ್ವನಿಗಳಿಂದ ರೂಪುಗೊಳ್ಳಬೇಕು ಎಂದು ಜಿಲ್ಲಾಧಿಕಾರಿಯವರು ಒತ್ತಿ ಹೇಳಿದರು.

ರಾಷ್ಟ್ರೀಯ ಮಟ್ಟದ ಸಂವಾದದ ಮಹತ್ವವನ್ನು ಎತ್ತಿ ತೋರಿಸಿದ ಜಿಲ್ಲಾಧಿಕಾರಿ ಶ್ರೀರೂಪ ಅವರು ಇಂತಹ ವಿಚಾರ ಸಂಕಿರಣಗಳು ಅಂತರ–ಜಿಲ್ಲಾ ಸಹಯೋಗ, ಜ್ಞಾನ ಹಂಚಿಕೆ ಮತ್ತು ನೀತಿ ಸೂಕ್ಷ್ಮತೆಯನ್ನು ಬೆಳೆಸುತ್ತವೆ. ಅಂತಿಮವಾಗಿ ರಾಜ್ಯ ಗಡಿಗಳಲ್ಲಿ ಬುಡಕಟ್ಟು ಸಮುದಾಯಗಳ ಸಬಲೀಕರಣ ಮತ್ತು ಸುಸ್ಥಿರ ಅಭಿವೃದ್ಧಿಗೆ ಕೊಡುಗೆ ನೀಡುತ್ತವೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ರಾಷ್ಟ್ರೀಯ ವಿಚಾರ ಸಂಕಿರಣದ ಸಾರಾಂಶಗಳನ್ನೊಳಗೊಂಡ ಬುಕ್ ಆಫ್ ಅಬ್ಸ್ಟ್ರಾಕ್ಟ್ ಪುಸ್ತಕವನ್ನು ಬಿಡುಗಡೆ ಮಾಡಿದರು. ಇದು ಚರ್ಚೆಗಳ ಶೈಕ್ಷಣಿಕ ಅಡಿಪಾಯವನ್ನು ಗುರುತಿಸುತ್ತದೆ ಮತ್ತು ಸಂಶೋಧನೆ–ಬೆಂಬಲಿತ ನೀತಿ ಚರ್ಚೆಗಳ ಮಹತ್ವವನ್ನು ತಿಳಿಸಲಿದೆ.

ಚಾಮರಾಜನಗರ ಜಿಲ್ಲಾಡಳಿತವು ಸಹಯೋಗ ಮತ್ತು ಸಾಂಸ್ಕೃತಿಕವಾಗಿ ಒಟ್ಟುಗೂಡುವಿಕೆಯಿಂದ ಬುಡಕಟ್ಟು ಸಮುದಾಯಗಳ ಸಮಗ್ರ ಆಡಳಿತ ಮತ್ತು ಅಭಿವೃದ್ಧಿಗೆ ತನ್ನ ಬದ್ಧತೆಯನ್ನು ಪುನರುಚ್ಚರಿಸಿತು.

ಸುಲ್ತಾನ್ ಬತ್ತೇರಿಯ ಶಾಸಕ ಐ.ಸಿ. ಬಾಲಕೃಷ್ಣನ್, ಮುನ್ಸಿಪಾಲ್ಟಿ ಅಧ್ಯಕ್ಷ ರಸೀನ ಅಬ್ದುಲ್ ಖಾದರ್, ಬೆಂಗಳೂರಿನ ಎನ್.ಎಲ್.ಎಸ್.ಐ.ಯುನ ಸಾಮಾಜಿಕ ಒಳಗೊಳ್ಳುವಿಕೆಯ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ. ಸೋನಿ ಪೆಲ್ಲಿಸ್ಸೆರಿ, ಸುಲ್ತಾನ್ ಬತ್ತೇರಿಯ ಸೆಂಟ್ ಮೇರಿಸ್ ಕಾಲೇಜಿನ ವ್ಯವಸ್ಥಾಪಕ ಡಾ. ಜೀವರ್ಗಿಸ್ ವಾರ್ ಬಾರ್ನಬಾಸ್, ಸ್ಥಾನಿಕ ವ್ಯವಸ್ಥಾಪಕರಾದ ರೆ. ಬೇಬಿಜಾನ್, ಬುಡಕಟ್ಟು ಅಭಿವೃದ್ಧಿ ಅಧಿಕಾರಿ ಕೆ.ಕೆ. ಮೋಹನ್ ದಾಸ್, ಪ್ರೊ. ವರ್ಗೀನಿಯಸ್ ಕ್ವಾಕ್ಸ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಕ್ರೀಡಾ ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದನೆ

**ಚಾಮರಾಜನಗರ.ಫೆ.12:–** ಚಾಮರಾಜನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ತೃತೀಯ ಬಿ.ಕಾಂ ವಿದ್ಯಾರ್ಥಿಯಾದ ಆರ್. ನವೀನ್ ಕುಮಾರ್ ನಾಗಲ್ಯಾಂಡ್‌ನಲ್ಲಿ ನಡೆದ ಮ್ಯಾರಥಾನ್ ಓಟದಲ್ಲಿ 11ನೇ ಸ್ಥಾನ ಪಡೆದಿದ್ದಾರೆ.



ಹರಿಯಾಣದಲ್ಲಿ ಫೆಬ್ರವರಿ 13ರಂದು ನಡೆಯಲಿರುವ ಕ್ರಾಸ್ ಕ್ರಂಟಿ ಕ್ರೀಡೆಯಲ್ಲಿ ಅಂತಿಮ ವರ್ಷದ ಬಿ.ಕಾಂ ವಿದ್ಯಾರ್ಥಿಗಳಾದ ಮಧುಸೂದನ್ ಹಾಗೂ ಆರ್. ನವೀನ್ ಕುಮಾರ್ ಆಯ್ಕೆಯಾಗಿ ಭಾಗವಹಿಸುತ್ತಿದ್ದಾರೆ. ಪ್ರಾಂಶುಪಾಲರಾದ ಡಾ. ಆರ್.ಎಸ್. ಅಶ್ವಿನಿ, ಕ್ರೀಡಾ ಸಂಚಾಲಕರಾದ ಜಿ.ಕೆ ದೀಪ್ತಿ, ಅಧ್ಯಾಪಕರು ಹಾಗೂ ಉಪನ್ಯಾಸಕರು ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

# ಬಿ.ಗಣೇಕಲ್ ಶಾಲೆಯಲ್ಲಿ ಕಸ್ಟರ ಮಟ್ಟದ ಕಲಿಕಾ ಹಬ್ಬ ಮಕ್ಕಳಿಗೆ ಕಲಿಕೆಯೇ ಒಂದು ಹಬ್ಬ: ಶಿವರಾಜ ಪೂಜಾರಿ

ಯುವಮಾರ್ಗ ಸುದ್ದಿ

**ಅರಕೇರಾ,ಫೆ.12–**ಮಕ್ಕಳ ಕಲಿಕೆಯನ್ನು ತಿಳಿಯುವ ಮಹತ್ವಾಕಾಂಕ್ಷೆಯ ಕಾರ್ಯಕ್ರಮಮಕ್ಕಳಿಗೆ ಕಲಿಕೆಯೇ ಒಂದು ಹಬ್ಬವಾಗುತ್ತದೆ. ಎಂದು ತಾಲೂಕು ಕ್ಷೇತ್ರ ಸಮನ್ವಯ ಅಧಿಕಾರಿ ಶಿವರಾಜಪೂಜಾರಿ ಅಭಿಪ್ರಾಯಪಟ್ಟರು. ಅವರು ಬುಧುವಾರ ಅರಕೇರಾ ತಾಲೂಕಿನ ಬಿ. ಗಣೇಕಲ್ ಸರಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜನೆಗೊಂಡಿದ್ದ ಬಿ. ಗಣೇಕಲ್ ಕ್ಲಸ್ಟರ್‌ನ ಕಲಿಕಾಹಬ್ಬವನ್ನು ಉದ್ಘಾಟಿಸಿ ಮಾತನಾಡಿದರು.

ಕಲಿಕಾ ಹಬ್ಬವು ಮಕ್ಕಳಲ್ಲಿರುವ ವಿವಿಧ ಬಗೆಯ ಪ್ರತಿಭೆಯ ಸಾಮರ್ಥ್ಯವನ್ನು ಪ್ರಸ್ತುತಪಡಿಸಲು ಅವಕಾಶ ಮಾಡಿಕೊಡುತ್ತದೆ. ಜೊತೆಗೆ ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚಾಗುವಂತೆ ಮಾಡುತ್ತದೆ.

ಗುಣಮಟ್ಟದ ಶಿಕ್ಷಣವನ್ನು ನೀಡಲು ಆದ್ಯತೆ ನೀಡಲಾಗಿದೆ. ಮಕ್ಕಳ ಕಲಿಕೆಗೆ ಶಿಕ್ಷಕರು ವಿಶೇಷ ಗಮನಹರಿಸಿ ಮಕ್ಕಳನ್ನು ಪ್ರೇರೇಪಿಸಬೇಕು ಎಂದರು.



ಪ್ರಸ್ತಾವಿಕವಾಗಿ ಬಸವರಾಜ ಸಾತಲ್ ಸಿ ಆರ್ ಪಿ ಬಿ ಗಣೇಕಲ್ ಮಾತನಾಡಿದರು.ವೆಂಕಟೇಶ್ ಇ ಸಿ ಓ ಶಿವಕುಮಾರ್ ನಾಡಗೌಡ ಬಿ ಆರ್ ಪಿ ಹಾಗೂ SDMC ಅಧ್ಯಕ್ಷರು ಉಪಾಧ್ಯಕ್ಷರು ಸರ್ವ ಸದಸ್ಯರು ರೈತ ಸಂಘದ ಅಧ್ಯಕ್ಷರು ಮುಖ್ಯ ಗುರುಗಳು ಶಿಕ್ಷಕರು ಅತಿಥಿ ಶಿಕ್ಷಕರು ಭಾಗವಹಿಸಿದ್ದರು.ಪ್ರಿಯಾಂಕ ಶಿಕ್ಷಕರು ಸ್ವಾಗತ ಕೋರಿದರು ಸದ್ದಂ ಹುಸೇನ್ ಶಿಕ್ಷಕರು ವಂದಿಸಿದರು.

# ಖಬರ್ಸ್ಥಾನ್ ತಡೆಗೋಡೆ ಕಾಮಗಾರಿ ವಿಳಂಬ: ಅಧಿಕಾರಿಗಳ ವಿರುದ್ಧ ಮುಸ್ಲಿಂ ಮುಖಂಡ ಎಂ.ಡಿ. ಹುಸೇನ್ ಆಕ್ರೋಶ

ಯುವಮಾರ್ಗ ಸುದ್ದಿ

**ಸಿರವಾರ,ಫೆ.12–** ಪಟ್ಟಣದ ಫಿರ್ದೋಸ್ ಖಬರ್ಸ್ಥಾನ್‌ಗೆ ತಡೆಗೋಡೆ ನಿರ್ಮಾಣ ಮಾಡಲು ಪಟ್ಟಣ ಪಂಚಾಯಿತಿಯಲ್ಲಿ ಅಗತ್ಯ ಅನುದಾನ ಲಭ್ಯವಿದ್ದರೂ, ಅಧಿಕಾರಿಗಳ ವಿಳಂಬ ನೀತಿಯಿಂದಾಗಿ ಕಾಮಗಾರಿ ಕುಂಠಿತಗೊಂಡಿದೆ ಎಂದು ಮುಸ್ಲಿಂ ಮುಖಂಡರಾದ ಎಂ.ಡಿ. ಹುಸೇನ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

**ಅಧಿಕಾರಿಗಳ ಹಾರಿಕೆ ಉತ್ತರಕ್ಕೆ ಆಕ್ರೋಶ–** ಮಾಧ್ಯಮಗಳೊಂದಿಗೆ ಮಾತನಾಡಿದ ಎಂ.ಡಿ. ಹುಸೇನ್, "ಈ ಯೋಜನೆಯ ಬಗ್ಗೆ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಯೋಜನಾ ನಿರ್ದೇಶಕರಿಗೆ ಪೂರ್ಣ ಮಾಹಿತಿಯಿದೆ. ಆದರೂ ಸ್ಥಳೀಯ ಅಧಿಕಾರಿಗಳು ಒಬ್ಬರ ಮೇಲೊಬ್ಬರು ಜವಾಬ್ದಾರಿ ತಳ್ಳುತ್ತಿದ್ದಾರೆ. ವಕ್ಫ್ ಅಧಿಕಾರಿಗಳಿಂದ ಆದೇಶ ಬಂದಿಲ್ಲ ಎಂದು ಪಟ್ಟಣ ಪಂಚಾಯಿತಿ ಎಇ ಹೇಳುತ್ತಿದ್ದರೆ, ಪಂಚಾಯಿತಿಯಿಂದ ಯಾವುದೇ ಸೂಚನೆ



ಇಲ್ಲ ಎಂದು ವಕ್ಫ್ ಅಧಿಕಾರಿಗಳು ಹೇಳುತ್ತಿದ್ದಾರೆ. ಇವರ ಈ ಹಾರಿಕೆ ಉತ್ತರಗಳಿಂದಾಗಿ ಕಾಮಗಾರಿ ನೆನೆಗುದಿಗೆ ಬಿದ್ದಿದೆ," ಎಂದು ದೂರಿದರು.

**ಜಿಲ್ಲಾಧಿಕಾರಿಗಳ ಭೇಟಿಗೆ ಸಿದ್ಧತೆ–** ಕಾಮಗಾರಿ ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ಎಂ.ಡಿ. ಹುಸೇನ್ ಅವರು ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ. "ಕೂಡಲೇ ತಡೆಗೋಡೆ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸದಿದ್ದಲ್ಲಿ, ಮುಸ್ಲಿಂ ಸಮಾಜದ ಮುಖಂಡರು ಹಾಗೂ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳೊಂದಿಗೆ ತೆರಳಿ ಮತ್ತೊಮ್ಮೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ದೂರು ಮತ್ತು ಮನವಿ ಸಲ್ಲಿಸಲಾಗುವುದು," ಎಂದು ತಿಳಿಸಿದರು.

**ಅನುದಾನ ವಾಪಸ್ ಹೋಗುವ ಭೀತಿ:** "ಅನುದಾನವಿದ್ದರೂ ಕೆಲಸ ಮಾಡದೆ ಅಧಿಕಾರಿಗಳು ಕಾಲಹರಣ ಮಾಡುತ್ತಿದ್ದಾರೆ. ಇದು ಹೀಗೆ ಮುಂದುವರೆದರೆ ಹಣ ವಾಪಸ್ ಹೋಗುವ ಸಾಧ್ಯತೆಯಿದೆ. ಅಧಿಕಾರಿಗಳು ಕೂಡಲೇ ಎಚ್ಚೆತ್ತುಕೊಂಡು ಸಮನ್ವಯದೊಂದಿಗೆ ಕೆಲಸ ಆರಂಭಿಸಬೇಕು. ಇಲ್ಲದಿದ್ದರೆ ಪಟ್ಟಣ ಪಂಚಾಯಿತಿಗೆ ಮುತ್ತಿಗೆ ಹಾಕುವುದು ಅನಿವಾರ್ಯವಾಗುತ್ತದೆ," ಎಂದು ಅವರು ಎಚ್ಚರಿಸಿದ್ದಾರೆ.

# ಬಸ್ ನಿಲ್ದಾಣಕ್ಕೆ ನೂತನ ಪಟ್ಟಣ ಪಂಚಾಯತ್ ಅಧ್ಯಕ್ಷ ಹಾಜಿ ಚೌದರಿ ಭೇಟಿ: ಸ್ವಚ್ಛತೆಗೆ ಆದ್ಯತೆ, ಡಿಪೋ ಮ್ಯಾನೇಜರ್‌ಗೆ ಸೂಚನೆ

ಯುವಮಾರ್ಗ ಸುದ್ದಿ

**ಸಿರವಾರ,ಫೆ.12–**ನೂತನವಾಗಿ ಆಯ್ಕೆಯಾದ ಪಟ್ಟಣ ಪಂಚಾಯತ್ ಅಧ್ಯಕ್ಷರಾದ ಹಾಜಿ ಚೌದರಿ ಅವರು ಇಂದು ಸ್ಥಳೀಯ ಬಸ್ ನಿಲ್ದಾಣಕ್ಕೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸಾರ್ವಜನಿಕರ ದೂರುಗಳು ಹಾಗೂ ನಿಲ್ದಾಣದ ಸೌಕರ್ಯಗಳ ಕುರಿತು ಮಾಹಿತಿ ಪಡೆಯಲು ಅವರು ಈ ಭೇಟಿ ನೀಡಿದ್ದರು.

**ತ್ಯಾಜ್ಯ ವಿಲೇವಾರಿಗೆ ಸೂಚನೆ:** ಬಸ್ ನಿಲ್ದಾಣದ ಆವರಣದಲ್ಲಿ ಅಂಗಡಿ ಮುಂಗಟ್ಟುಗಳಿಂದ ಹೊರಬರುವ ಕಸದ ವಿಲೇವಾರಿಯ ಬಗ್ಗೆ ಅಧ್ಯಕ್ಷರು ಕಳವಳ ವ್ಯಕ್ತಪಡಿಸಿದರು. ಬಸ್ ನಿಲ್ದಾಣದ ಒಳಗಿರುವ ಎಲ್ಲಾ ಅಂಗಡಿಗಳ ಕಸವನ್ನು ಸಮರ್ಪಕವಾಗಿ ಸಂಗ್ರಹಿಸಿ, ಕಡ್ಡಾಯವಾಗಿ ಪಟ್ಟಣ ಪಂಚಾಯತ್ ತ್ಯಾಜ್ಯ ಸಂಗ್ರಹಣಾ ವಾಹನಕ್ಕೆ ನೀಡುವಂತೆ ಡಿಪೋ ವ್ಯಾನೇಜ ತ್ಯಾಜ್ಯ ಸಂಗ್ರಹಣಾ ವಾಹನಕ್ಕೆ ನೀಡುವಂತೆ ಡಿಪೋ ವ್ಯಾನೇಜರ್ ಅವರಿಗೆ ಖಡಕ್ ಸೂಚನೆ ನೀಡಿದರು.



**ಸ್ವಚ್ಛತಾ ಅಭಿಯಾನ:** ಡಿಪೋ ಸುತ್ತಮುತ್ತ ದೀರ್ಘಕಾಲದಿಂದ ಬಿದ್ದಿದ್ದ ಕಸದ ರಾಶಿಯನ್ನು ಅಧ್ಯಕ್ಷರ ಸಮ್ಮುಖದಲ್ಲೇ ಪಟ್ಟಣ ಪಂಚಾಯತ್ ಸಿಬ್ಬಂದಿಗಳ ಸಹಾಯದಿಂದ ತೆರವುಗೊಳಿಸ ಲಾಯಿತು. ನಿಲ್ದಾಣದ ಆವರಣವನ್ನು ಸದಾ ಕಾಲ ಸ್ವಚ್ಛವಾಗಿಡುವಂತೆ ಅಧಿಕಾರಿಗಳಿಗೆ ಅವರು ತಾಕೀತು ಮಾಡಿದರು.

**ಸಾರ್ವಜನಿಕ ಹಿತಾಸಕ್ತಿ:** ಪ್ರಯಾಣಿಕರಿಗೆ ಯಾವುದೇ ತೊಂದರೆಯಾಗದಂತೆ ನಿಲ್ದಾಣದ ಪರಿಸರವನ್ನು ನಿರ್ವಹಿಸುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದು ಅಧ್ಯಕ್ಷ ಹಾಜಿ ಚೌದರಿ ತಿಳಿಸಿದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತ್ ಅಧಿಕಾರಿಗಳು, ಡಿಪೋ ಮ್ಯಾನೇಜರ್ ಹಾಗೂ ಸ್ಥಳೀಯ ಪ್ರಮುಖರು ಉಪಸ್ಥಿತರಿದ್ದರು. ಅಧ್ಯಕ್ಷರ ಈ ಕ್ರಮಕ್ಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.

# ಅರಕೇರಾ: ದಿ.ಕೆ.ರಂಗಪ್ಪನಾಯಕ ದಳಪತಿ ವೃತ್ತ ಅನಾವರಣ

ಯುವಮಾರ್ಗ ಸುದ್ದಿ

**ಅರಕೇರಾ,ಫೆ.12–** ಪಟ್ಟಣದ ಸಿರವಾರ ಮುಖ್ಯರಸ್ತೆಯ ತಹಸೀಲ್ ಕಚೇರಿಗೆ ಹೋಗುವ ಮಾರ್ಗದಲ್ಲಿ ದಿ.ಕೆ.ರಂಗಪ್ಪನಾಯಕ ದಳಪತಿ ಅವರ ಭಾವಚಿತ್ರವಿರುವ ನಾಮಫಲಕದ ವೃತ್ತವನ್ನು ಮುಂಡರಗಿಯ ಶಿವಣ್ಣತಾತತನವರು ಗುರುವಾರ ಅನಾವರಣಗೊಳಿಸಿದರು.

ವಿಶ್ವನಾಥಹಿರೇಮಠ.ಸಿದ್ದಯ್ಯಸ್ವಾಮಿ ಮಠಪತಿ ಬಸವರಾಜಸ್ವಾಮಿ ಮಠಪತಿ ವಿವಿಧ ದಾರ್ಮಿಕ ಕಾರ್ಯಕ್ರಮಗಳನ್ನು ನೆರವೇರಿಸಿದರು.

ಪ್ರಮುಖರಾದ ಸತ್ಯನಾರಾಯಣ ನಾಯಕ ಪೋಲಿಸ್ ಪಾಟೀಲ್,ಶಾಮ ರಾವ್‌ಕುಲ್ಕರ್ಣಿ,ಕೆ.ಅನಂತರಾಜನಾಯಕ, ಎ.ರಾಜಶೇಖರನಾಯಕ, ಕೆ.ಭಗವಂತ್ರಾಯನಾಯಕ.ಕೆ.ನಾಗರಾಜನಾಯಕ, ಡಾ.ಎಚ್ ಎ.ನಾಡಗೌಡ,ಜಂಬಣ್ಣನೀಲಗಲ್, ಶರಣಬಸವಪಾಟೀಲ್ ಜೋಳದಹೆಡಗಿ ತಾಲೂಕಾ ಬಿಜೆಪಿ ಅಧ್ಯಕ್ಷರು, ಚನ್ನವೀರಯ್ಯಸ್ವಾಮಿ ಹಿರೇಮಠ, ಸೀತಣ್ಣನಾಯಕ ಗರಿಕಾರ ವೆಂಕಟೇಶನಾಯಕದೊರೆ, ಶಿವರಾಜಪೂಜಾರಿ ,ಹನುಮಂತ್ರಾಯ ಪೂಜಾರಿ ರಾಮೇಶ್ವರಸ್ವಾಮಿ, ಚಂದ್ರಶೇಖರ ಶೆಟ್ಟಿ ಶೇಖರಪ್ಪಗೌಡ ಮಾ.ಪಾ. ರಾಮನಗೌಡ'ದೊರೆ, ವರದರಾಜ ನಾಯಕ ದೊರೆ, ಮಲ್ಲಿಕಾರ್ಜುನ ಗುಡಿ, ಶರಣಗೌಡಮಾ.ಪಾ. ಹನುಮಂತ ಶಾವಂತಗಲ್, ವಿರೇಶಗೌಡಮಾ,ಪಾ, ಶರಣಪ್ಪನಾಯಕ ಬುದ್ದಿನ್ನಿ ಜಾವೀಧ್ ಆರ್ ಚಿಂಚೋಳಿಕರ್ ಮೋನಪ್ಪನಾಯಕ ಕ್ಯಾದಿಗ್ಗೇರಾ,ದುರಗನಗೌಡ ಆಕಳಕುಂಪಿ,ಬಸವರಾಮುಲು ಸೇರಿದಂತೆ ಅಭಿಮಾನಿಗಳು ಸಹಸ್ರಾರು ಸಂಖ್ಯೆಯಲ್ಲಿ ಹಿತೈಶಿಗಳು ಭಾಗವಹಿಸಿದ್ದರು.




ಚಿತ್ರಸುದ್ದಿ ಸಂಖ್ಯೆ 12(2)ದಿ.ಕೆ.ರಂಗಪ್ಪನಾಯಕ ದಳಪತಿ ಅವರ ಭಾವಚಿತ್ರವಿರುವ ನಾಮಫಲಕದ ವೃತ್ತವನ್ನು ಮುಂಡರಗಿಯ ಶಿವಣ್ಣತಾತತನವರು ಗುರುವಾರ ಅನಾವರಣಗೊಳಿಸಿದರು

# ಬೇಸಿಗೆಯಲ್ಲಿ ಎಲ್ಲಾ ಕಡೆಗಳಲ್ಲೂ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆಯಾಗಲಿ: ನಿತೀಶ್ ಕೆ



ಯುವಮಾರ್ಗ ಸುದ್ದಿ

**ರಾಯಚೂರು ಫೆ,12–** ಬೇಸಿಗೆ ಆಗಮನದ ಹಿನ್ನೆಲೆಯಲ್ಲಿ ಈಗಾಗಲೇ ಬಿಸಿಲು ಏರಲಾರಂಭಿಸಿದೆ. ಆದ್ದರಿಂದ ರಾಯಚೂರು ಜಿಲ್ಲೆಯಲ್ಲಿ ಮುಂಬರುವ ಬೇಸಿಗೆಯ ಸಮಯದಲ್ಲಿ ಸಮರ್ಪಕವಾದ ಕುಡಿಯುವ ನೀರಿನ ವ್ಯವಸ್ಥೆಗೆ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ನೂತನ ಜಿಲ್ಲಾಡಳಿತ ಭವನದಲ್ಲಿ ಕೇಸ್ವಾನ್ ಹಾಲನಲ್ಲಿ ಫೆ.12ರ ಸಂಜೆ ಜಿಲ್ಲಾ ಹಾಗೂ ತಾಲೂಕುಮಟ್ಟದ ಅಧಿಕಾರಿಗಳೊಂದಿಗೆ ವಿಡಿಯೋ ಸಂವಾದ ನಡೆಸಿ ಅವರು ಮಾತನಾಡಿದರು.

ಈ ಭಾಗಕ್ಕೆ ನೀರು ಪೂರೈಸುವ ತುಂಗಭದ್ರಾ ಡ್ಯಾಮನ ಕ್ರಸ್ಟೇಟ್‌ಗಳ ಅಳವಡಿಕೆ ಕಾಮಗಾರಿ ಹಿನ್ನೆಲೆಯಲ್ಲಿ ತುಂಗಾ ಕಾಲುವೆ ನೀರು ಅವಲಂಬಿಸಿರುವ ಸಿಂಧನೂರು, ಮಾನ್ವಿ, ಮಸ್ಕಿ, ಸಿರವಾರ ಮತ್ತು ರಾಯಚೂರು ತಾಲೂಕುಗಳಲ್ಲಿ ನೀರಿನ ಲಭ್ಯತೆ ಪರಿಸ್ಥಿತಿಯ ಬಗ್ಗೆ ಈಗಿನಿಂದಲೇ ಗಮನ ಹರಿಸಬೇಕು. ಈ ಭಾಗದ ಕೆರೆಗಳಲ್ಲಿ ಈಗಿರುವ ನೀರಿನ ಪ್ರಮಾಣ ಎಷ್ಟು? ಕೆರೆಗಳನ್ನು ಇನ್ಮುಂದೆ ಯಾವ ವೇಳೆಗೆ ತುಂಬಿಸಬೇಕು? ಎನ್ನುವಂತಹ ಅಂಶಗಳ ಬಗ್ಗೆ ಆಯಾ ತಾಲೂಕಿನ ತಹಸೀಲ್ದಾರರು, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಪುರಸಭೆ, ನಗರಸಭೆ ಪಟ್ಟಣ ಪಂಚಾಯಿತಿಯ ಮುಖ್ಯ ಅಧಿಕಾರಿಗಳು ಕಾರ್ಯಯೋಜನೆ ರೂಪಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಜಿಲ್ಲೆಯ ಆಯಾ ತಾಲೂಕಿನಲ್ಲಿನ ಕೆರೆಗಳಲ್ಲಿನ ನೀರಿನ ವ್ಯವಸ್ಥೆಯ ಬಗ್ಗೆ ಜಿಲ್ಲಾಧಿಕಾರಿಗಳು ಆಯಾ ತಹಸೀಲ್ದಾರಗಳಿಂದ ಸಮಗ್ರ ಮಾಹಿತಿ ಪಡೆದುಕೊಂಡರು.

ಸಿಂಧನೂರ ತಾಲೂಕಿನಲ್ಲಿ ಒಟ್ಟು 155 ಕೆರೆಗಳಿದ್ದು, ಈ ಪೈಕಿ 151 ಕೆರೆಗಳು ಸಹ ಭಾಗಶಃ ತುಂಬಿವೆ. ಮಾರ್ಚ ಕೊನೆಯ ವಾರದಲ್ಲಿ ನಮಗೆ ನೀರಿನ ಅವಶ್ಯಕತೆ ಬರುತ್ತದೆ ಎಂದು ಸಿಂಧನೂರ ತಹಸೀಲ್ದಾರು ಸಭೆಗೆ ಮಾಹಿತಿ ನೀಡಿದರು. ಮಾನವಿ ತಾಲೂಕಿನಲ್ಲಿ ಒಟ್ಟು 18 ಕೆರೆಗಳಿದ್ದು ಎಲ್ಲ ಕೆರೆಗಳು ಭಾಗಶಃ ತುಂಬಿದ್ದು ಇನ್ನು 45 ದಿನಗಳವರೆಗೆ ನಮಗೆ ನೀರಿನ ಸಮಸ್ಯೆಯಾಗುವುದಿಲ್ಲ ಎಂದು ಮಾನ್ವಿ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಸಿರವಾರ ತಾಲೂಕಿನಲ್ಲಿ ಒಟ್ಟು 43 ಕೆರೆಗಳಿವೆ. ಈ ಪೈಕಿ 4 ಕೆರೆಗಳು ಪೂರ್ಣ ತುಂಬಿವೆ. ಇನ್ನು 39 ಕೆರೆಗಳು ಭಾಗಶಃ ತುಂಬಿವೆ. ಅತ್ತನೂರ ಮತ್ತು ಕಲ್ಲೂರ ಪಂಚಾಯಿತಿಯ ವ್ಯಾಪ್ತಿಯ ಕೆರೆಗಳಿಗೆ ನೀರಿನ ಕೊರತೆ ಇದೆ ಎಂದು ಸಿರವಾರ ತಾಲೂಕು ಅಧಿಕಾರಿಗಳು ಮಾಹಿತಿ ನೀಡಿದರು. ಮಸ್ಕಿ ತಾಲೂಕಿನಲ್ಲಿ ಒಟ್ಟು 21 ಕೆರೆಗಳಿದ್ದು, ಈ ಪೈಕಿ 16 ಕೆರೆಗಳಲ್ಲಿ ನೀರು ಇದೆ. ಇನ್ನುಳಿದ ಕೆರೆಗಳಿಗೆ ನೀರಿನ ಕೊರತೆಯಾಗಿದೆ ಎಂದು ಮಸ್ಕಿ ಪುರಸಭೆ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ರಾಯಚೂರು ತಾಲೂಕಿನಲ್ಲಿ 15 ಕೆರೆಗಳಿದ್ದು ಎಲ್ಲ ಕೆರೆಗಳು ಭಾಗಶಃ ತುಂಬಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಮುದಗಲ್ ಪಟ್ಟಣದಲ್ಲಿ ಸದ್ಯಕ್ಕೆ ನೀರಿನ ತೊಂದರೆ ಇಲ್ಲ. ನಾರಾಯಾಣಪುರ ಡ್ಯಾಮನಿಂದ ಅವಶ್ಯಕ ಸಂದರ್ಭದಲ್ಲಿ ನೀರು ಪಡೆದುಕೊಳ್ಳವುದಾಗಿ ಅಲ್ಲಿನ ಪುರಸಭೆ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ರಾಯಚೂರು ಸಿಟಿಗೆ ತೊಂದರೆಯಾಗದಿರಲಿ: ರಾಯಚೂರು ಸಿಟಿ ಮತ್ತು ರಾಯಚೂರು ಗ್ರಾಮೀಣ ಪ್ರದೇಶದಲ್ಲಿ ಕುಡಿವ ನೀರಿನ ಪರಿಸ್ಥಿತಿಯ ಬಗ್ಗೆ ಜಿಲ್ಲಾಧಿಕಾರಿಗಳು ಪಾಲಿಕೆಯ ಅಧಿಕಾರಿಗಳು ಮತ್ತು ತಹಸೀಲ್ದಾರ ಅವರಿಂದ ಮಾಹಿತಿ ಪಡೆದುಕೊಂಡರು. ಗಣೇಕಲ್ ಜಲಾಶಯ ಮತ್ತು ಅಲ್ಲಿನ ನೀರಿನ ನಿರ್ವಹಣೆ ಕುರಿತು ಗಮನ ಹರಿಸಿ ರಾಯಚೂರು ಸಿಟಿಗೆ ಸಮರ್ಪಕ ಕುಡಿವ ನೀರಿಗೆ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಲಿಂಗಸೂರು ತಾಲೂಕಿನಲ್ಲಿ ಅವ್ಯವಸ್ಥೆಯಾಗದಿರಲಿ: ಲಿಂಗಸೂರು ತಾಲೂಕಿನಲ್ಲಿ ಕಳೆದ ಬಾರಿ ಬೇಸಿಗೆಯ ಅವಧಿಯಲ್ಲಿ ಕುಡಿವ ನೀರು ಪೂರೈಕೆಯಲ್ಲಿ ಸ್ವಲ್ಪ ಮಟ್ಟಿಗೆ ವ್ಯತ್ಯಯ ಉಂಟಾಗಿತ್ತು. ಈ ವರ್ಷ ಹಾಗಾಗದಂತೆ ಸಾಕಷ್ಟು ಮುಂಜಾಗ್ರತೆ ವಹಿಸಬೇಕು. ಬೇಸಿಗೆ ಅವಧಿಯಲ್ಲಿ ಲಿಂಗಸೂರ ತಾಲೂಕಿಗೆ ಇಂತಿಷ್ಟು ಪ್ರಮಾಣದ ನೀರು ಬೇಕು ಎಂದು ನಾಂರಾಯಣಪುರ ಡ್ಯಾಮನ ಅಧಿಕಾರಿಗಳಿಗೆ ನೀರಿನ ಬೇಡಿಕೆಯ ಪತ್ರ ತುರ್ತು ರವಾನೆಗೆ ಕ್ರಮ ವಹಿಸಬೇಕು ಎಂದು ಸಹಾಯಕ ಆಯುಕ್ತರು, ತಹಸೀಲ್ದಾರರು, ಪುರಸಭೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

**ಪ್ರತಿ ತಿಂಗಳು ಟಾಸ್ಕಪೋರ್ಸ್ ಸಭೆಗಳಾಗಲಿ:** ಎಲ್ಲ ತಾಲೂಕುಗಳಲ್ಲಿ ಪ್ರತಿ ತಿಂಗಳು ಕಡ್ಡಾಯವಾಗಿ ಟಾಸ್ಕಪೋರ್ಸ್ ಸಭೆಗಳು ನಡೆಯುವಂತೆ ತಹಸೀಲ್ದಾರರು ಮತ್ತು ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು ಸಮನ್ವಯ ವಹಿಸಿ ಅಗತ್ಯ ವ್ಯವಸ್ಥೆ ಮಾಡಬೇಕು. ಕಾಲರಾ, ವಾಂತಿ ಬೇದಿ ಪ್ರಕರಣಗಳು ದಾಖಲು ಆಗದ ಹಾಗೆ ಮುಂಜಾಗ್ರತೆ ವಹಿಸಿ ನೀರಿನ ಪರೀಕ್ಷೆಗೆ ಮೊದಲಾದ್ಯತೆ ನೀಡಬೇಕು ಎಂದು ಜಿಲ್ಲಾಧಿಕಾರಿಗಳು ಗ್ರಾಮೀಣ ಕುಡಿವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

**ಖಾಸಗಿ ಬೋರವೆಲ್‌ಗೆ ಆದ್ಯತೆ ನೀಡಿ:** 2025–2026ನೇ ವರ್ಷದಲ್ಲಿ ಸಾಕಷ್ಟು ಮಳೆಯಾಗಿ ಅಂತರ್ಜಲ ನೀರಿನ ಮಟ್ಟ ಸುಧಾರಿಸಿದೆ. ಹಾಗಾಗಿ ನೀರಿನ ಸಮಸ್ಯೆ ಕಂಡು ಬಂದಲ್ಲಿ ಬೋರವೆಲ್ ಕೊರೆಯಿಸಲು ಕ್ರಮ ವಹಿಸಬೇಕು. ಕೊಳವೆಬಾವಿ ವಿಫಲವಾದಲ್ಲಿ ಹತ್ತಿರದ ಖಾಸಗಿ ಬೋರವೆಲ್‌ಗಳಿಂದಲೇ ನೀರು ಪೂರೈಕೆಗೆ ಹೆಚ್ಚಿನ ಒತ್ತು ಕೊಡಬೇಕು. ಟ್ಯಾಂಕರ್ ಬಳಕೆಗೆ ಹೆಚ್ಚಿನ ಆದ್ಯತೆ ನೀಡಬಾರದು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚನೆ ನೀಡಿದರು.

**ಜಿಪಂ ಸಿಇಓ ನಿರ್ದೇಶನ:** ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಈಶ್ವರ ಕಾಂದೂ ಅವರು ಮಾತನಾಡಿ, ಯಾವುದೇ ಕಡೆಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಪೈಪಲೈನ್ ದುರಸ್ತಿಗೆ ಒತ್ತು ಕೊಡಬೇಕು. ಮೇಲ್ಮಟ್ಟದ ಜಲಾಗಾರಗಳನ್ನು ಪ್ರತಿ ತಿಂಗಳು ಕಡ್ಡಾಯವಾಗಿ ಶುಚಿಗೊಳಿಸಬೇಕು. ಕಾಲಕಾಲಕ್ಕೆ ನೀರಿನ ಪರೀಕ್ಷೆ ನಡೆಸಿಯೇ ನೀರು ಪೂರೈಕೆಗೆ ಒತ್ತು ಕೊಡಬೇಕು. ಈ ಬಗ್ಗೆ ಎಲ್ಲ ತಾಲೂಕಿನ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಎಲ್ಲ ಪಿಡಿಓಗಳು ಗಮನ ಹರಿಸಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ವಿಡಿಯೋ ಸಂವಾದ ಸಭೆಯಲ್ಲಿ ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ಬಸವಣೆಪ್ಪ ಕಲಶೆಟ್ಟಿ, ಆಯಾ ತಾಲೂಕಿನ ತಹಸೀಲ್ದಾರರು, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳು, ಕೆಬಿಜೆಎನ್‌ಎಲ್‌ನ ಅಧಿಕಾರಿ ಬಸನಗೌಡ, ಆರೋಗ್ಯ ಇಲಾಖೆಯ ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ.ಗಣೇಶ್, ಗ್ರಾಮೀಣ ಕುಡಿಯುವ ನೀರು ಮತ್ತು ಸರಬರಾಜು ಇಲಾಖೆಯ ಅಭಿಯಂತರ ನಾಗರಾಜ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

# ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ:ದೊಡ್ಡಮನಿ

**ಸೈದಾಪುರ;ಫೆ.12–**ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಬ್ದಾರಿಯಾಗಿದೆ ಎಂದು ಮುಖ್ಯಗುರು ಯಂಕಪ್ಪ ದೊಡ್ಡಮನಿ ಅಭಿಪ್ರಾಯಪಟ್ಟರು.

ಪಟ್ಟಣದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಕೋ ಕ್ಲಬ್ ವತಿಯಿಂದ ಹಮ್ಮಿಕೊಂಡ ಪರಿಸರ ಸಂರಕ್ಷಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಉತ್ತಮ ಆರೋಗ್ಯಕ್ಕೆ ಪರಿಸರ ಅತಿ ಮಹತ್ವದ್ದಾಗಿದೆ. ವಿದ್ಯಾರ್ಥಿಗಳು ಚಿಕ್ಕಂದಿನಿಂದಲೇ ಪರಿಸರದ ಬಗ್ಗೆ ಕಾಳಜಿ ವಹಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಬದಲಾದ ಜೀವನ ಪದ್ಧತಿಯಿಂದ ಪರಿಸರದಲ್ಲಿ ವಿವಿಧ ರೀತಿಯ ಮಾಲಿನ್ಯವನ್ನು ಕಾಣುವಂತಾಗಿದೆ. ಈ ದಿಸೆಯಲ್ಲಿ ಸರಕಾರ ವಿವಿಧ ಕಾರ್ಯಕ್ರಗಳ ಮೂಲಕ ಪರಸರದ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದೆ. ಕಾರ್ಯಕ್ರಮದಲ್ಲಿ ಅತಿಥಿಗಳು ನೀಡುವ ಸಲಹೆ ಸೂಚನೆಗಳನ್ನು ಪಾಲನೆ ಮಾಡುವ ಮೂಲಕ ಪರಿಸರ ರಂಕ್ಷಣೆ ಮಾಡಬೇಕು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ವಿದ್ಯಾ ವರ್ಧಕ ಪ್ರೌಢ ಶಾಲೆಯ ವಿಜ್ಞಾನ ಶಿಕ್ಷಕ ರಾಚಯ್ಯ ಸ್ವಾಮಿ ಬಾಡಿಯಾಲ, ಅಜೀಮ ಪ್ರೇಮಜಿ ಫೌಂಡೇಶನ ಶಿಕ್ಷಕ ಕಲಿಕೆ ಕೇಂದ್ರದ ಸಂಯೋಜಕ ಮಲ್ಲೇಶ.ಎನ್.ವಗ್ಗರ ಮಾತನಾಡಿದರು. ಶಿಕ್ಷಕರಾದ ದೀಪಿಕಾ, ಬಲರಾಮ, ಶ್ರೀದೇವಿ, ಗೀತಾ, ರತ್ನಮ್ಮ, ವಿದ್ಯಾರ್ಥಿಗಳು ಸೇರಿದಂತೆ ಇತರರಿದ್ದರು. ಶಿಕ್ಷಕಿ ಶಾಂತಮ್ಮ ಸ್ವಾಗತಿಸಿದರು. ದೈಹಿಕ ಶಿಕ್ಷಕ ಮಹಿಪಾಲರೆಡ್ಡಿ ನಿರೂಪಿಸಿದರು. ಶಿವಕಾಂತಮ್ಮ ವಂದಿಸಿದರು.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H